ಸಂಪುಟ: 06 ಸಂಚಿಕೆ: 113 ಪುಟಗಳು: 08 ಸೋಮವಾರ 06 ಜುಲೈ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಇಡೀ ದಿನ ಕೆಲಸದಲ್ಲೇ ನಿರತರಾಗಿರುತ್ತೇವೆ ಅನ್ನುವುದು ಮುಖ್ಯವಲ್ಲ. ಕೆಲಸ ಯಾವುದು ಎಂಬುದು ಮುಖ್ಯವಾಗುತ್ತದೆ, ಸತ್ಕಾರ್ಯದಲ್ಲಿ ತೊಡಗಿಕೊಳ್ಳೋಣ!

# ಉದಯ ವಾಹಿನಿ
UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಇವಿ ಬಸ್‌ಗಳಿಂದ ಸಾಲು ಸಾಲು ಅಪಘಾತ ? ಹೊಸ ಎಲೆಕ್ಟ್ರಿಕ್ ಬಸ್ ಖರೀದಿಗೆ ತಾತ್ಕಾಲಿಕ ಬ್ರೇಕ್

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಇವಿ ಬಸ್‌ಗಳಿಂದ ಸಾಲು ಸಾಲು ಅಪಘಾತಗಳು ನಡೆದ ಬೆನ್ನಲ್ಲೇ ಹೊಸ ಎಲೆಕ್ಟ್ರಿಕ್ ಬಸ್ ಖರೀದಿಗೆ ಸಾರಿಗೆ ಇಲಾಖೆ ತಾತ್ಕಾಲಿಕ ಬ್ರೇಕ್ ಹಾಕಿದೆ. ಇವಿ ಬಸ್ ಚಾಲಕರ ಯಡವಟ್ಟಿಗೆ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಹಿಂದಿನ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರು ಕೇಂದ್ರಕ್ಕೆ ಪತ್ರ ಬರೆದಿದ್ದರು. ಇವಿ ಬಸ್ ಅವಾಂತರದ ಬಗ್ಗೆ ದಾಖಲೆ ಸಮೇತ ಕೇಂದ್ರದ ಗಮನಕ್ಕೆ ತಂದಿದ್ದರು. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಈಗ ಸಾರಿಗೆ ಇಲಾಖೆ, ಸದ್ಯಕ್ಕೆ ಹೊಸ ಇವಿ ಬಸ್ ಖರೀದಿ ಬೇಡ ಎಂಬ ನಿರ್ಧಾರಕ್ಕೆ ಸರ್ಕಾರ ಬಂದಿದೆ. ಪದೇ ಪದೇ ಮರುಕಳಿಸುತ್ತಿರೋ ಇವಿ ಬಸ್ ಅಪಘಾತದ ಬಗ್ಗೆ ಅಧ್ಯಯನಕ್ಕೆ ಸಾರಿಗೆ ಇಲಾಖೆ ಮುಂದಾಗಿದೆ. ಸಾರಿಗೆ ಸಚಿವರ ಸೂಚನೆ ಮೇರೆಗೆ ನಗರದ ಇವಿ ಬಸ್ ಕಾರ್ಯಕ್ಷಮತೆ ಅಧ್ಯಯನ ನಡೆಸಲಿದೆ. ಈ ಬಗ್ಗೆ ಸಾರಿಗೆ ಇಲಾಖೆ ಕಾರ್ಯದರ್ಶಿಗೆ ಸೂಚನೆ ನೀಡಲಾಗಿದೆ. ವರದಿ ಆಧಾರಿಸಿ ಮುಂದೆ ಹೊಸ ಇವಿ ಬಸ್ ಖರೀದಿಗೆ ಸರ್ಕಾರ ನಿರ್ಧಾರ ಮಾಡಲಿದೆ. ಸದ್ಯ ರಾಜ್ಯಕ್ಕೆ ಈ ವರ್ಷ ಸುಮಾರು ಒಂದೂವರೆ ಸಾವಿರ ಹೊಸ ಇವಿ ಬಸ್ ಸೇರ್ಪಡೆಯಾಗಬೇಕಿತ್ತು.

## ರಾಮಮಂದಿರ ಹೆಸರಿನಲ್ಲಿ ರಾಜಕೀಯ ಅಸ್ತಿತ್ವ ರೂಪಿಸಿದ್ದ ಬಿಜೆಪಿ-ಮೋದಿ: ಪ್ರಿಯಾಂಕ್

• ಉದಯವಾಹಿನಿ, ಬೆಂಗಳೂರು



ಅಯೋಧ್ಯೆಯ ರಾಮಮಂದಿರದ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ರಾಜ್ಯ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ರಾಮಮಂದಿರ ಎಂಬುದು ಎಂದಿಗೂ ನಂಬಿಕೆಯ ವಿಷಯವಾಗಿರಲಿಲ್ಲ, ಅದು ಕೇವಲ ಅಧಿಕಾರ ಮತ್ತು ಹಣ ಗಳಿಸುವ ಯಂತ್ರವಾಗಿತ್ತು' ಎಂದು ಅವರು ಆರೋಪಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಇಡೀ ರಾಜಕೀಯ ಅಸ್ತಿತ್ವವನ್ನೇ ರಾಮಮಂದಿರದ ಹೆಸರಿನಲ್ಲಿ ರೂಪಿಸಿದ್ದಾರೆ ಎಂದು ಟೀಕಿಸಿದ್ದಾರೆ. 1990ರ ದಶಕದಿಂದಲೂ ಆರ್‌ಎಸ್‌ಎಸ್ ರಾಮಮಂದಿರದಲ್ಲಿ ಕೇಂದ್ರಿತವಾಗಿದೆ. ಈಗ ನಡೆದಿರುವ ಕಾಣಿಕೆ ಕಳವು ಪ್ರಕರಣವು ಅಸಲಿ ಮುಖವನ್ನು ಬಹಿರಂಗಗೊಳಿಸಿದೆ' ಎಂದು ಅವರು ಆರೋಪಿಸಿದ್ದಾರೆ.

**ಗೃಹ ಸಚಿವರಾದ ಬಳಿಕ ಕಲಬುರಗಿಗೆ ಭೇಟಿ:** ರಾಜ್ಯದ ಗೃಹ ಸಚಿವರಾದ ಬಳಿಕ ಇದೇ ಮೊದಲ ಬಾರಿಗೆ ಜಿಲ್ಲೆ ಆಗಮಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಕಾಂಗ್ರೆಸ್ ಪಕ್ಷದ ನಾಯಕರು, ಮುಖಂಡರು ಹಾಗೂ ಅಭಿಮಾನಿಗಳು ಅದ್ದೂರಿಯಾಗಿ ಭರಮಾಡಿಕೊಂಡರು. ನಗರದ ನೆಹರೂ ಗಂಜ್ ಪ್ರದೇಶದ ನಗರೇಶ್ವರ ಶಾಲೆಯ ಎದುರು ಬಂದಿಳಿದ ಕಲಬುರಗಿ, ಯಾದಗಿರಿ ಜಿಲ್ಲೆಗಳ ಉಸ್ತುವಾರಿ ಸಚಿವರೂ ಆಗಿರುವ ಪ್ರಿಯಾಂಕ್ ಖರ್ಗೆ ಅವರನ್ನು ಮೊದಲಿಗೆ ತೆರೆದ ಕಾರಿನಲ್ಲಿ, ಬಳಿಕ ಸಿಂಗರಿಸಿದ ಲಾರಿಯ ಮೇಲೆ ಏರಿಸಿ ಮೆರವಣಿಗೆ ಮಾಡಲಾಯಿತು. ಬಗೆಬಗೆಯ ಪುಷ್ಪಗಳ ವೃಷ್ಟಿಗೈದು ಸಂಭ್ರಮಿಸಿದರು.

## ಗೃಹಜ್ಯೋತಿ ಪರಿಶೀಲನೆ ಬಾಡಿಗೆದಾರರಲ್ಲಿ ಹೆಚ್ಚಿದ ಆತಂಕ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ- ಮನೆ ಪರಿಶೀಲನೆ ಜುಲೈ 1ರಿಂದ ಆರಂಭವಾಗಿದ್ದು, ಇದರ ಬೆನ್ನಲ್ಲೇ ರಾಜ್ಯದ ಸಾವಿರಾರು ಬಾಡಿಗೆದಾರರಲ್ಲಿ ಆತಂಕ ಹೆಚ್ಚಾಗಿದೆ. ಹೊಸ ಪರಿಶೀಲನಾ ನಿಯಮಗಳಿಂದಾಗಿ ಅನೇಕರು ಉಚಿತ ವಿದ್ಯುತ್ ಸೌಲಭ್ಯ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಪ್ರತಿ ತಿಂಗಳು 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಗೃಹ ಜ್ಯೋತಿ ಯೋಜನೆಯಲ್ಲಿ ಅಕ್ರಮ ಬಳಕೆ ನಡೆಯುತ್ತಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಇಂಧನ ಇಲಾಖೆ ಪರಿಶೀಲನೆ ಆರಂಭಿಸಿದೆ. ವಾಣಿಜ್ಯ ಕಟ್ಟಡಗಳಲ್ಲಿ ವಾಸಿಸುವವರು ಸೇರಿದಂತೆ ಕೆಲ ಅನರ್ಹರು ನಿಯಮ ಉಲ್ಲಂಘಿಸಿ ಯೋಜನೆಯ ಲಾಭ ಪಡೆಯುತ್ತಿರುವ ಬಗ್ಗೆ ದೂರುಗಳು ಬಂದಿದ್ದರಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ.

ಪರಿಶೀಲನೆ ವೇಳೆ ಅಧಿಕಾರಿಗಳು ಫಲಾನುಭವಿಗಳ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಹಾಗೂ ಬಾಡಿಗೆ ಒಪ್ಪಂದದ ದಾಖಲೆಗಳನ್ನು ಪರಿಶೀಲಿಸಲಿದ್ದಾರೆ.

ಅಗತ್ಯ ದಾಖಲೆಗಳನ್ನು ಸಲ್ಲಿಸಲು ವಿಫಲರಾದರೆ ಗೃಹ ಜ್ಯೋತಿ ಯೋಜನೆಯಡಿ ದೊರೆಯುತ್ತಿರುವ ಉಚಿತ ವಿದ್ಯುತ್ ಸೌಲಭ್ಯವನ್ನು ಸ್ಥಗಿತಗೊಳಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

## ವಿಧಾನಸೌಧದಲ್ಲಿ ವಿದ್ಯುತ್, ನೀರಿನ ಪೋಲು ತಡೆಗೆ ಕಟ್ಟುನಿಟ್ಟಿನ ಕ್ರಮ: ಸರ್ಕಾರದ ಸ್ಪಷ್ಟೀಕರಣ

• ಉದಯವಾಹಿನಿ, ಬೆಂಗಳೂರು

ವಿಧಾನಸೌಧ ಹಾಗೂ ಇತರೆ ಸರ್ಕಾರಿ ಕಚೇರಿಗಳಲ್ಲಿ ವಿದ್ಯುತ್ ಮತ್ತು ನೀರಿನ ಸಂರಕ್ಷಣೆ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಯನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಈ ಸಂಬಂಧ ಸ್ಪಷ್ಟೀಕರಣ ನೀಡಿದೆ. ರಾಜ್ಯ ಸರ್ಕಾರವು ವಿದ್ಯುತ್ ಹಾಗೂ ನೀರಿನ ಸಂರಕ್ಷಣೆಗೆ ಅತ್ಯುನ್ನತ ಆದ್ಯತೆ ನೀಡಿದ್ದು, ಸರ್ಕಾರಿ ಕಚೇರಿಗಳಲ್ಲಿ ಇಂಧನ ಮತ್ತು ಜಲ ಸಂಪನ್ಮೂಲಗಳ ಮಿತವ್ಯಯದ ಬಳಕೆಯನ್ನು ಖಚಿತಪಡಿಸಲು ಈಗಾಗಲೇ ವಿವಿಧ ಕ್ರಮಗಳನ್ನು ಜಾರಿಗೊಳಿಸಿದೆ. ಈ ಸಂಬಂಧ ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆಯು ದಿನಾಂಕ: 21.02.2022 ರಂದೇ ಅಗತ್ಯ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಇಲಾಖೆಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ವಿಧಾನಸೌಧದಲ್ಲಿ ಸಂಪನ್ಮೂಲಗಳ ಸಂರಕ್ಷಣೆಗಾಗಿ ಪ್ರಮುಖ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

**ಟ್ರಂಪ್ ಗುಡುಗು**



ಅಮೆರಿಕ ಅಧ್ಯಕ್ಷ ಟ್ರಂಪ್ ಇರಾನ್ ನಾಯಕರಿಗೆ ನೇರ ಬೆದರಿಕೆ ಹಾಕಿದ್ದಾರೆ. ಇರಾನ್‌ನ ಉನ್ನತ ನಾಯಕರು ಅಂತ್ಯಕ್ರಿಯೆಗಾಗಿ ಒಂದೆಡೆ ಸೇರಿದ್ದು, ಅವರನ್ನು ಒಂದೇ ಹೊಡೆತಕ್ಕೆ ಮುಗಿಸಬಹುದು ಎಂದು ಟ್ರಂಪ್ ಹೇಳಿದ್ದಾರೆ. ಅಮೆರಿಕ ಇರಾನ್ ಮೇಲೆ ಆರ್ಥಿಕ ದಿಗ್ಬಂಧನ ಹೇರಿ ಸಂಪೂರ್ಣ ನಾಶಪಡಿಸಿದೆ ಎಂದು ಟ್ರಂಪ್ ವ್ಯಂಗ್ಯವಾಡಿದ್ದಾರೆ. ಇದಕ್ಕೆ ಇರಾನ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಉಭಯ ದೇಶಗಳ ನಡುವೆ ಪರೋಕ್ಷ ಮಾತುಕತೆಗಳು ನಡೆಯುತ್ತಿದ್ದರೂ, ಪರಿಸ್ಥಿತಿ ಉದ್ವಿಗ್ನವಾಗಿದೆ.

**ಒಂದು ಗುಂಡು ಸಾಕು ಮಾತುಕತೆಗೆ ಯಾರೂ ಉಳಿಯುವುದಿಲ್ಲ**



### ಯುದ್ಧದ ಭೀತಿ ಮತ್ತು ಇರಾನ್ ಎಚ್ಚರಿಕೆ:

ಅಂತ್ಯಕ್ರಿಯೆಯ ಸಿದ್ಧತೆಗಳ ನಡುವೆಯೇ, ಇರಾನ್ ಮಿಲಿಟರಿ ಕಮಾಂಡರ್ ಅಲಿ ಅಬ್ದೊಲ್ಲಾಹಿ, ಅಮೆರಿಕ ಮತ್ತು ಇಸ್ರೇಲ್‌ಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ. ನಮ್ಮ ದೇಶದ ಮೇಲೆ ದಾಳಿ ಮಾಡುವ ಯಾವುದೇ ತಪ್ಪು ಲೆಕ್ಕಾಚಾರಗಳನ್ನು ಮಾಡಬೇಡಿ. ಒಂದು ವೇಳೆ ದಾಳಿ ನಡೆದರೆ ನಮ್ಮ ಸೇನೆ ನೀಡುವ ಪ್ರತ್ಯುತ್ತರ ಬಹಳ ಭೀಕರವಾಗಿರುತ್ತದೆ, ಎಂದು ಅವರು ಎಚ್ಚರಿಸಿದ್ದಾರೆ.

ಅಲ್ಲದೆ, ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರು, ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿ ಅವರನ್ನೂ ಗುರಿಯಾಗಿಸಿಕೊಂಡಿದ್ದೇವೆ ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಕ್ಚಿ, ನಾಯಕತ್ವದ ಮೇಲೆ ನಡೆಯುವ ಯಾವುದೇ ದಾಳಿಗೆ ತಕ್ಷಣವೇ ಬಲವಾದ ಪ್ರತಿಕ್ರಿಯೆ ನೀಡಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಭದ್ರತೆಯ ದೃಷ್ಟಿಯಿಂದ ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿ ಅವರು ತಮ್ಮ ತಂದೆಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದು ಅನುಮಾನ ಎಂದು ಭಾರತದಲ್ಲಿನ ಸುಪ್ರೀಂ ಲೀಡರ್ ಪ್ರತಿನಿಧಿ ಆಯತೊಲ್ಲಾ ಹಕೀಮ್ ಇಲಾಹಿ ತಿಳಿಸಿದ್ದಾರೆ.

# ಟ್ರಂಪ್ ಬೆದರಿಕೆ ಇರಾನ್ ಎಚ್ಚರಿಕೆ

• ಉದಯವಾಹಿನಿ, ವಾಷಿಂಗ್ಟನ್

ಅಮೆರಿಕ ಮನಸ್ಸು ಮಾಡಿದರೆ ಒಂದೇ ಹೊಡೆತದಲ್ಲಿ ಇಡೀ ಇರಾನ್ ನಾಯಕತ್ವವನ್ನು ನಿರ್ಮೂಲನೆ ಮಾಡುವ ಶಕ್ತಿ ನಮಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಗುಡುಗಿದ್ದಾರೆ. ಅಮೆರಿಕಕ್ಕೆ ಇರುವ ಶಕ್ತಿಯನ್ನು ದುರ್ಬಳಕೆ ಮಾಡಿಕೊಳ್ಳುವುದಿಲ್ಲ ಬದಲಾಗಿ, ಇರಾನ್ ಜೊತೆಗಿನ ಪರಮಾಣು ಒಪ್ಪಂದ ಮಾತುಕತೆಗಳಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದ್ದಾರೆ. ಇರಾನ್‌ನ ಸರ್ವೋಚ್ಚ ನಾಯಕ ಆಯಾತೊಲ್ಲ ಅಲಿ ಖಮೇನಿ ಅವರ ಅಂತ್ಯಕ್ರಿಯೆಗೆ ನೆರೆದಿದ್ದ ಇರಾನ್ ನಾಯಕತ್ವವನ್ನು ಅಮೆರಿಕ ಹೊಡೆಯಬಹುದಿತ್ತು, ಆದರೆ ಹಾಗೆ ಮಾಡುವುದಿಲ್ಲ. ಅಂತಹ ಕ್ರಮವನ್ನು ತಪ್ಪಿಸುವ ಮೂಲಕ ಇರಾನ್ ಜೊತೆಗಿನ ಪರಮಾಣು ಮಾತುಕತೆಗೆ ಒತ್ತು ನೀಡಿದ್ದೇವೆ ಎಂದಿದ್ದಾರೆ.

ಇರಾನ್‌ನ ಮಾಜಿ ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆಯ ಸಂದರ್ಭದಲ್ಲೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧದ ತಮ್ಮ ವಾಗ್ದಾಳಿಯನ್ನು ಮುಂದುವರೆಸಿದ್ದಾರೆ. ಅಂತ್ಯಕ್ರಿಯೆಗಾಗಿ ಇರಾನ್‌ನ ಎಲ್ಲಾ ಉನ್ನತ ನಾಯಕರು ಒಂದೇ ಕಡೆ ಸೇರಿದ್ದು, ಅಮೆರಿಕ ಮನಸ್ಸು ಮಾಡಿದರೆ ಒಂದೇ ಹೊಡೆತದಲ್ಲಿ ಅವರೆಲ್ಲರನ್ನೂ ನಾಶಪಡಿಸಬಲ್ಲದು ಎಂದು ಟ್ರಂಪ್ ಹೇಳಿದ್ದಾರೆ.

ಆಕ್ಸಿಯಾಸ್ ಸಂಸ್ಥೆಯೊಂದಿಗೆ ಮಾತನಾಡಿದ ಟ್ರಂಪ್, ಅವರೆಲ್ಲರೂ ಅಲ್ಲೇ ಇದ್ದಾರೆ. ಒಂದೇ ಒಂದು ದಾಳಿಯ ಮೂಲಕ ನಾವು ಇರಾನ್‌ನ ಇಡೀ ನಾಯಕತ್ವವನ್ನು ಇಲ್ಲದಂತೆ ಮಾಡಬಹುದು. ಆದರೆ ನಾವು ಹಾಗೆ ಮಾಡುತ್ತಿಲ್ಲ, ಏಕೆಂದರೆ ಆಮೇಲೆ ನಮ್ಮೊಂದಿಗೆ ಮಾತುಕತೆ ನಡೆಸಲು ಅಲ್ಲಿ ಯಾರೂ ಉಳಿಯುವುದಿಲ್ಲ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ. ಇತ್ತೀಚೆಗೆ ನಡೆದ ಅಮೆರಿಕ-ಇಸ್ರೇಲ್ ಜಂಟಿ ದಾಳಿಯಲ್ಲಿ ಅಯತೊಲ್ಲಾ ಅಲಿ ಖಮೇನಿ ಹತರಾದ ಬಳಿಕವೂ ಟ್ರಂಪ್ ಇರಾನ್ ಮೇಲಿನ ಒತ್ತಡವನ್ನು ಕಡಿಮೆ ಮಾಡಿಲ್ಲ. ನಾವು ಇರಾನ್ ಅನ್ನು ಆರ್ಥಿಕವಾಗಿ ಸಂಪೂರ್ಣವಾಗಿ ನಾಶಪಡಿಸಿದ್ದೇವೆ. ಅಲ್ಲಿ ಹಣದುಬ್ಬರ ಗಗನಕ್ಕೇರಿದೆ. ಈಗ ಅವರು ಅಮೆರಿಕ ಜೊತೆ ಒಪ್ಪಂದ ಮಾಡಿಕೊಳ್ಳಲು ಹತಾಶರಾಗಿದ್ದಾರೆ. ನಾವು ಒಳ್ಳೆಯವರಾದ್ದರಿಂದ ಅವರಿಗೆ ಅಂತ್ಯಕ್ರಿಯೆ ಮುಗಿಸಲು ಒಂದು ವಾರ ಕಾಲಾವಕಾಶ ನೀಡಿದ್ದೇವೆ ಎಂದು ಟ್ರಂಪ್ ವ್ಯಂಗ್ಯವಾಡಿದ್ದಾರೆ. ಅಲ್ಲದೆ, ರಾಜತಾಂತ್ರಿಕ ಮಾತುಕತೆಗಳು ಯಶಸ್ವಿಯಾದರೆ ಇರಾನ್‌ಗೆ ಅಮೆರಿಕದ ರೈತರು ಆಹಾರ ಪೂರೈಸಬಹುದು ಎಂದೂ ಅವರು ಹೇಳಿದ್ದಾರೆ. ಇರಾನ್ ತೀವ್ರ ಆಕ್ರೋಶ ಟ್ರಂಪ್ ಅವರ ಈ ಹೇಳಿಕೆಗೆ ಇರಾನ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಅರ್ಮೇನಿಯಾದಲ್ಲಿರುವ ಇರಾನ್ ರಾಯಭಾರ ಕಚೇರಿಯು, ಅಮೆರಿಕ ಅಧ್ಯಕ್ಷರಿಗೆ ನಾಗರಿಕತೆ, ಇತಿಹಾಸ ಮತ್ತು ಗೌರವ ಯಾವುದೂ ಇಲ್ಲ ಎಂದು ಕಿಡಿಕಾರಿದೆ. ಇದೇ ವೇಳೆ ಇರಾನ್‌ನ ಮಿಲಿಟರಿ ಅಧಿಕಾರಿಗಳು ಅಮೆರಿಕ ಮತ್ತು ಇಸ್ರೇಲ್‌ಗೆ ಎಚ್ಚರಿಕೆ ನೀಡಿದ್ದು, ಯಾವುದೇ ರೀತಿಯ ಹೊಸ ಮಿಲಿಟರಿ ದಾಳಿ ಅಥವಾ ತಪ್ಪು ಲೆಕ್ಕಾಚಾರ ನಡೆದರೆ ಅದಕ್ಕೆ ತ್ವರಿತ ಮತ್ತು ಭೀಕರ ಪ್ರತಿಪ್ರಹಾರ ಎದುರಿಸಬೇಕಾಗುತ್ತದೆ ಎಂದಿದ್ದಾರೆ.

ಉದ್ವಿಗ್ನತೆ ನಡುವೆಯೂ ಮುಂದುವರೆದ ಮಾತುಕತೆ ಉಭಯ ದೇಶಗಳ ನಡುವೆ ಇಷ್ಟೆಲ್ಲಾ ಮಾತಿನ ಸಮರ ನಡೆಯುತ್ತಿದ್ದರೂ, ಕತಾರ್‌ನ ದೋಹಾದಲ್ಲಿ ಅಮೆರಿಕ ಮತ್ತು ಇರಾನ್ ಅಧಿಕಾರಿಗಳ ನಡುವೆ ಪರೋಕ್ಷ ಮಾತುಕತೆಗಳು ಮುಂದುವರೆದಿವೆ. ಸಮುದ್ರ, ಭದ್ರತೆ ಮತ್ತು ಆರ್ಥಿಕ ವಿಷಯಗಳ ಕುರಿತಾದ ಚರ್ಚೆಯಲ್ಲಿ ಸ್ವಲ್ಪ ಪ್ರಗತಿಯಾಗಿದೆ ಎಂದು ಮೂಲಗಳು ತಿಳಿಸಿವೆ.

ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಇನ್ನೂ ಭಿನ್ನಾಭಿಪ್ರಾಯಗಳು ಜೀವಂತವಾಗಿದ್ದು, ಅಂತ್ಯಕ್ರಿಯೆಯ ನಂತರ ಮತ್ತೊಂದು ಸುತ್ತಿನ ಮಾತುಕತೆ ನಡೆಯುವ ಸಾಧ್ಯತೆ ಇದೆ. ರಾಜತಾಂತ್ರಿಕ ಮಾತುಕತೆಯ ಹಾದಿ ತೆರೆದಿದ್ದರೂ, ಇರಾನ್ ವಿರುದ್ಧ ಟ್ರಂಪ್ ಅವರ ಕಠಿಣ ನಿಲುವು ಮಾತ್ರ ಬದಲಾದಂತೆ ಕಾಣುತ್ತಿಲ್ಲ.

**ಅತ್ಯಂತ ಬಲಿಷ್ಠ ಸೇನೆ:** ಅಮೆರಿಕದ 250ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಮಾತನಾಡಿದ ಟ್ರಂಪ್, ಇರಾನ್ ಹಾಗೂ ವೆನಿಜುವೆಲಾದ ಮೇಲೆ ನಡೆಸಿದ ಅಮೆರಿಕದ ಸೇನಾಬಲದ ಕುರಿತು ಕೊಂಡಾಡಿದ್ದಾರೆ. ವೆನಿಜುವೆಲಾದ ಮೇಲಿನ ದಾಳಿಯನ್ನು ಕುರಿತು ಪ್ರತಿಕ್ರಿಯಿಸಿದ ಅವರು, 'ನಾವು ಕೇವಲ ಒಂದೇ ದಿನದಲ್ಲಿ ವೆನಿಜುವೆಲಾ ದೇಶವನ್ನು ಸೋಲಿಸಿದ್ದೇವೆ. ಜಗತ್ತಿನ ಇತಿಹಾಸದಲ್ಲೇ ಅತ್ಯಂತ ಬಲಿಷ್ಠ ಸೇನೆಯನ್ನು ಅಮೆರಿಕ ಹೊಂದಿದೆ' ಎಂದು ಹೊಗಳಿದ್ದಾರೆ.

**1** ಖಮೇನಿ ಅಂತ್ಯಕ್ರಿಯೆಯ ವೇಳೆ ಇರಾನ್ ಎಲ್ಲಾ ಪ್ರಮುಖ ನಾಯಕರನ್ನು ಒಂದೇ ದಾಳಿ ಮುಗಿಸಬಹುದಿತ್ತು ಎಂದ ಟ್ರಂಪ್.

**2** ಟ್ರಂಪ್ ಅವರ ಈ ಅಹಂಕಾರಿ ಹೇಳಿಕೆಗೆ ಇರಾನ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

**3** ಉಭಯ ದೇಶಗಳ ನಡುವಿನ ಸಂಘರ್ಷ ಮತ್ತಷ್ಟು ಬಿಗಡಾಯಿಸಿದೆ.

### ಸುಳ್ಳು ಕಣ್ಣೀರು ಹಾಕುತ್ತಿರಬಹುದು

ಅಂತ್ಯಕ್ರಿಯೆಯ ವೇಳೆ ಜನ ಅಳುತ್ತಿರುವುದನ್ನು ನೋಡಿ ತಮಗೆ ಆಶ್ಚರ್ಯವಾಯಿತು ಎಂದಿರುವ ಟ್ರಂಪ್, ಜನರಿಗೆ ಖಮೇನಿ ಅಂದರೆ ಇಷ್ಟವಿಲ್ಲ ಎಂದುಕೊಂಡಿದ್ದೆ, ಬಹುಶಃ ಅವರು ಸುಳ್ಳು ಕಣ್ಣೀರು ಹಾಕುತ್ತಿರಬಹುದು, ಎಂದು ಲೇವಡಿ ಮಾಡಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಅರ್ಮೇನಿಯಾದಲ್ಲಿರುವ ಇರಾನ್ ರಾಯಭಾರ ಕಚೇರಿ, ಎಕ್ಸ್ (ಟ್ವಿಟರ್)ನಲ್ಲಿ ನಿಮಗೆ ನಾಗರಿಕತೆ, ಇತಿಹಾಸ ಅಥವಾ ಗೌರವ ಯಾವುದೂ ಇಲ್ಲದಿರುವುದರಿಂದಲೇ ಇಂತಹ ವಿಷಯಗಳು ಅರ್ಥವಾಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದೆ.

**ಟ್ರಂಪ್ ಲೇವಡಿ**

### ಇಸ್ರೇಲ್ ಪ್ರಧಾನಿಗೆ ಟ್ರಂಪ್ ಖಡಕ್ ಸಂದೇಶ

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ರಾಜತಾಂತ್ರಿಕ ಸಂಬಂಧದಲ್ಲಿ ತೀವ್ರ ಬಿರುಕು ಕಾಣಿಸಿಕೊಂಡಿದೆ. ಶ್ವೇತಭವನದಲ್ಲಿ ಇಬ್ಬರ ಭೇಟಿಗೆ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೇ, ಟ್ರಂಪ್ ಮತ್ತು ಅವರ ಸಲಹೆಗಾರರು ಇಸ್ರೇಲ್ ಪ್ರಧಾನಿ ವಿರುದ್ಧ ಗಂಭೀರ ಅಸಮಾಧಾನ ಹೊರಹಾಕಿದ್ದಾರೆ. ಇತ್ತೀಚಿನ ಸಂದರ್ಶನವೊಂದರಲ್ಲಿ ಮಾತನಾಡಿದ ಡೊನಾಲ್ಡ್ ಟ್ರಂಪ್, ನೆತನ್ಯಾಹು ಅವರು ಶ್ವೇತಭವನದಲ್ಲಿ ತುರ್ತು ಸಭೆಗಾಗಿ ವಿನಂತಿಸಿದ್ದಾರೆ ಎಂಬುದನ್ನು ಖಚಿತಪಡಿಸಿದ್ದಾರೆ. ಇದೇ ವೇಳೆ ತಮ್ಮ ಎಂದಿನ ಶೈಲಿಯಲ್ಲಿ ಮಾತನಾಡಿದ ಟ್ರಂಪ್, ನೆತನ್ಯಾಹು ಅವರಿಗೆ ಯಾರು ಬಾಸ್ ಎಂಬುದು ಚೆನ್ನಾಗಿ ಗೊತ್ತು ಎಂದು ಹೇಳುವ ಮೂಲಕ ಜಾಗತಿಕ ರಾಜಕಾರಣದಲ್ಲಿ ಅಮೆರಿಕದ ಪ್ರಾಬಲ್ಯವನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ.

## ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿಂದೂಗಳು ತಕ್ಕ ಪಾಠ ಕಲಿಸಲಿದ್ದಾರೆ : ಬಿ.ವೈ.ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್‌ನವರ ಪಾಪದ ಕೊಡ ತುಂಬಿದ್ದು, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಹಿಂದೂಗಳು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಬೆಳಗಾವಿ ಜಿಲ್ಲೆಯ ಕಾಂಗ್ರೆಸ್ ಮುಖಂಡ ಸದಾಶಿವ ದೇಶಿಂಗಿ ಅವರು ಬಿಜೆಪಿಗೆ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಯಾವುದೇ ಭಾಗದಲ್ಲೂ ಹಿಂದುಗಳ ಮೇಲೆ ಹಲ್ಲೆ ಅಥವಾ ಹತ್ಯೆ ನಡೆಯುವುದಿಲ್ಲ. ಕರ್ನಾಟಕದಲ್ಲಿ ಮಾತ್ರ ಇದು ವ್ಯವಸ್ಥಿತವಾಗಿ ನಡೆಯುತ್ತದೆ. ಒಂದಿಲ್ಲೊಂದು ಸರ್ಕಾರದ ವಿರುದ್ಧ ಸಮಸ್ತ ಹಿಂದೂಗಳು ತಿರುಗಿ ಬೀಳಲಿದ್ದಾರೆ ಎಂದು ಎಚ್ಚರಿಕೆ ಕೊಟ್ಟರು.

ಹಾವೇರಿಯ ಘಟನೆ ಕಾಂಗ್ರೆಸ್‌ಗೆ ನಾಚಿಕೆಯಾಗಬೇಕು. ಲೋಹಿತ್, ಶಿವರಾಜ್ ಸೇರಿ 5 ಜನರ ಮೇಲೆ ಹಲ್ಲೆ ಆಗಿದೆ. ಪಟಾಕಿ ಹೊಡೆದರೆಂಬ ಕ್ಷುಲ್ಲಕ ಕಾರಣಕ್ಕೆ ಮನೆಗೆ ನುಗಿ ತಂದೆಯ ಮೇಲೆ ಹಲ್ಲೆ ಮಾಡಿದ್ದಾರೆ. ಇದನ್ನು ತಡೆಯಲು ಹೋದ ಲೋಹಿತನ ಮೇಲೆ ಹಲ್ಲೆ ನಡೆದಿದೆ. ಕಾಂಗ್ರೆಸ್‌ನವರಿಗೆ ಬಡ ಕುಟುಂಬಕ್ಕೆ ಧೈರ್ಯ ತುಂಬುವ ಮಾಡಬೇಕು ಅನ್ನಿಸಿಲ್ಲ. ಧೈರ್ಯ ಹೇಳುವ ಕಿಂಚಿತ್ತು ಕೆಲಸವನ್ನೂ ಕಾಂಗ್ರೆಸ್ ಮಾಡಿಲ್ಲ. ಪಕ್ಷಗಳು ಅಧಿಕಾರಕ್ಕೆ ಬರುತ್ತದೆ, ಹೋಗುತ್ತದೆ ಆದರೆ ಏನು ಕೆಲಸ ಮಾಡಿದ್ದೇವೆ ಎಂಬುದು ಮುಖ್ಯ ಎಂದರು. ಯಲ್ಲಾಪುರದಲ್ಲಿ ದಲಿತ ಮಹಿಳೆ ಹತ್ಯೆಯಾಗಿದೆ. ಯಾವೊಬ್ಬ ಸಚಿವರು ಹೋಗಿ ಸಾಂತ್ವನ ಹೇಳಿಲ್ಲ. ಬೆಂಗಳೂರಿನ ಎಸಿ ರೂಂನಲ್ಲಿ ಕೂತು, ಚೆಕ್ ಕಳುಹಿಸಿ ಕೊಡುತ್ತಾರೆ ಎಂದು ಕಿಡಿಕಾರಿದರು. ಇದಕ್ಕೂ ಮುನ್ನ ವಿಜಯೇಂದ್ರ ಅವರು, ಕುರುಬ ಸಮುದಾಯದ ಮುಖಂಡರಾಗಿರುವ ಸದಾಶಿವ ದೇಶಿಂಗೆ ಪಕ್ಷದ ಬಾವುಟ ಕೊಟ್ಟು, ಕಂಬಳಿ ಹೊದೆಸಿ ಪಕ್ಷಕ್ಕೆ ಸೇರಿಸಿಕೊಂಡರು. ಸಚಿವ



ಸತೀಶ್ ಜಾರಕಿಹೊಳಿ ಆಪ್ತ ವಲಯದಲ್ಲಿದ್ದ ದೇಶಿಂಗೆ ಗುರುತಿಸಿಕೊಂಡಿದ್ದಾರೆ, ಕೆಎಮ್‌ಎಫ್ ಮಾಜಿ ನಿರ್ದೇಶಕ, ರಾಯಭಾಗದಲ್ಲಿ ಪ್ರಭಾವಿಯಾಗಿದ್ದಾರೆ. ಅವರಿಗೆ ಕುರುಬ ಸಮಾಜದಲ್ಲಿ ತಮದೇ ಆದ ಶಕ್ತಿ ಇದೆ. ಬಿಜೆಪಿಗೆ ಅವರು ಬಂದಿದ್ದು ಉತ್ತರ ಕರ್ನಾಟಕ, ಕಿತ್ತೂರು ಕರ್ನಾಟಕಕ್ಕೆ ಆನೆ ಬಲ ಬಂದಂತಾಗಿದೆ ಎಂದರು. ಕನಕದಾಸ ಜಯಂತಿಯ ರಜೆ ಘೋಷಿಸಿದ್ದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸಮಾಜದಲ್ಲಿ ಜಗ್ಗಟ್ಟಿನ ಪ್ರದರ್ಶನ ಅಗಬೇಕು. 2019ರಲ್ಲಿ ಬಿಜೆಪಿ ಸರ್ಕಾರ ಯಡಿಯೂರಪ್ಪ ಸಿಎಂ ಆಗಬೇಕು ಎಂದು ಕಾಂಗ್ರೆಸ್ -ಜೆಡಿಎಸ್ ಪಕ್ಷಕೆ ರಾಜೀನಾಮೆ ಕೊಟ್ಟು ಬಂದರು. ಬೈರತಿ ಬಸವರಾಜು, ಎಂಟಿಬಿ ನಾಗರಾಜ್ ಅವರ ತ್ಯಾಗ ಮರೆಯಲು ಸಾಧ್ಯವಿಲ್ಲ. ಸಚಿವರಾಗಿದ್ದರೂ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಎಂದರು. ಬಿಜೆಪಿ ಹಾಲುಮತ ಸಮಾಜಕ್ಕೆ ಎಂದಿಗೂ ಅನ್ಯಾಯ ಮಾಡಿಲ್ಲ. ವಿಜಯ್ ಶಂಕರ್ ಅವರನ್ನು ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದರೂ ಎಂಎಲ್‌ಸಿ ಮಾಡಿ ಸಚಿವ ಸ್ಥಾನದಲ್ಲಿ ಕೂರಿಸಿದ್ದು ಯಡಿಯೂರಪ್ಪ ಎಂದು ಉಲ್ಲೇಖಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಶಾಸಕರಾದ ದುರ್ಯೋಧನ ಐಹೊಳೆ, ಬಸವರಾಜ ಮತ್ತಿಮಾಡು, ಬೈರತಿ ಬಸವರಾಜು, ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಉಪಸ್ಥಿತಿ ಇದ್ದರು

## ಕರಾವಳಿಯಲ್ಲಿ ಮುಂದುವರೆದ ವರುಣನ ಆರ್ಭಟ, ಮತ್ತಷ್ಟು ಮಳೆ ಹೆಚ್ಚಾಗುವ ಮುನ್ನೆಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ಜೂನ್ ತಿಂಗಳಲ್ಲಿ ದುರ್ಬಲಗೊಂಡಿದ್ದ ನೈರುತ್ಯ ಮುಂಗಾರು ಕರಾವಳಿ, ಮಲೆನಾಡು ಭಾಗದಲ್ಲಿ ಚುರುಕಾಗಿದ್ದು, ಭಾರಿ ಮಳೆಯಾಗುತ್ತಿದೆ. ಮುಂದಿನ ಮೂರು ದಿನಗಳ ಕಾಲ ಈ ಭಾಗದಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆಗಳಿವೆ. ಕಳೆದ ಮೂರು ದಿನಗಳಿಂದ ಕರಾವಳಿ ಜಿಲ್ಲೆಗಳಲ್ಲಿ ಮಳೆ ಆರ್ಭಟಿಸುತ್ತಿದ್ದು ಜನ ಜೀವನ ತತ್ತರಿಸುವಂತಾಗಿದೆ.

ಅದೇ ರೀತಿ ಮಲೆನಾಡು ಹಾಗೂ ಅದಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲೂ ಹೆಚ್ಚಿನ ಮಳೆಯಾಗುತ್ತಿದೆ. ಕರಾವಳಿ ಭಾಗದ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಮಲೆನಾಡು ಭಾಗದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಅತಿ ಭಾರಿ ಮಳೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆಯು ಆರೇಂಜ್ ಅಲರ್ಟ್ ಘೋಷಣೆ ಮಾಡಿದೆ. ಬೆಳಗಾವಿ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲೂ ಭಾರಿ ಮಳೆಯಾಗುವ ಲಕ್ಷಣಗಳಿದ್ದು, ಯೆಲ್ಲೋ ಅಲರ್ಟ್ ನೀಡಲಾಗಿದೆ.

ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಮೋಡ ಕವಿದ ವಾತಾವರಣ ಕಂಡುಬರಲಿದ್ದು, ಆಗಾಗ್ಗೆ ಮೇಲೈ ಬಲವಾದ ಗಾಳಿ ಸಹಿತ ಮಳೆಯಾಗಲಿದೆ. ಉಳಿದಂತೆ ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡು ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಚದುರಿದಂತೆ ಅಲ್ಲಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ಆಗಾಗ್ಗೆ ಮೇಲೈ ಗಾಳಿ ಬೀಸಲಿದ್ದು, ಭಾರಿ ಮಳೆಯಾಗುವ ಮುನ್ಸೂಚನೆಗಳಿಲ್ಲ. ಜೂನ್ ತಿಂಗಳಲ್ಲಿ ಮುಂಗಾರು ದುರ್ಬಲಗೊಂಡ



ಪರಿಣಾಮ ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆಯಾಗಿದೆ. ಆದರೆ, ಜುಲೈ ತಿಂಗಳ ಮೊದಲ ವಾರದಲ್ಲಿ ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಚೇತರಿಸಿಕೊಂಡಿದ್ದು, ವಾಡಿಕೆ ಪ್ರಮಾಣದ ಮಳೆಯಾಗುತ್ತಿದೆ. ಒಳನಾಡಿನಲ್ಲಿ ಮುಂಗಾರು ದುರ್ಬಲಗೊಂಡಿರುವ ಪರಿಣಾಮ ವಾಡಿಕೆ ಪ್ರಮಾಣದಲ್ಲಿ ಮಳೆಯಾಗುತ್ತಿಲ್ಲ. ಇದರಿಂದ ಬಿತ್ತನೆ ಮಾಡಲು ರೈತರು ಉತ್ತಮ ಮಳೆಯನ್ನೇ ಎದುರು ನೋಡುತ್ತಿದ್ದಾರೆ.

ಮಲೆನಾಡು ಭಾಗದಲ್ಲಿ ಮುಂಗಾರು ಚುರುಕಾಗಿರುವುದರಿಂದ ನೀರಿಲ್ಲದೆ, ಬರಿದಾಗುತ್ತಿದ್ದ ಪ್ರಮುಖ ನದಿ ಹಾಗೂ ಜಲಾಶಯಗಳಲ್ಲಿ ನೀರಿನ ಪ್ರಮಾಣ ಹೆಚ್ಚುತ್ತಿದ್ದು, ತುಸು ಸಮಾಧಾನ ತಂದಿದೆ. ಇದೇ ರೀತಿ ಮಳೆ ಮುಂದುವರೆದರೆ ಜಲಾಶಯಗಳಲ್ಲಿ ನೀರಿನ ಒಳಹರಿವು ಹೆಚ್ಚಲಿದೆ.

ಮುಂಗಾರು ಮಳೆ ಕೊರತೆಯಾಗಿರುವ ಬಹುತೇಕ ಕಡೆಗಳಲ್ಲಿ ಬರದ ಛಾಯೆ ಆವರಿಸತೊಡಗಿದೆ. ಕೃಷಿ ಇಲಾಖೆ ಪರ್ಯಾಯ ಹಾಗೂ ಅಲ್ಪಾವಧಿ ಬೆಳೆ ಬೆಳೆಯಲು ರೈತರಿಗೆ ಸಲಹೆ ಮಾಡಿದ್ದು, ಬರ ಎದುರಿಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಲು ಜಿಲ್ಲಾಡಳಿತಗಳಿಗೆ ಕಂದಾಯ ಇಲಾಖೆ ನಿರ್ದೇಶನ ನೀಡಿದೆ.

# ಸಚಿವ ಸ್ಥಾನಕ್ಕಾಗಿ ಬೆಂಬಲಿಗರ ನಿಯೋಗ ಬರಬಾರದು, ವರಿಷ್ಠರ ತೀರ್ಮಾನವೇ ಅಂತಿಮ: ಸಿಎಂ ಡಿ ಕೆ ಶಿವಕುಮಾರ್

## ಗ್ಯಾರಂಟಿ ಪರಿಷ್ಕರಣೆ, ಪಾದಚಾರಿ ಮಾರ್ಗ ಒತ್ತುವರಿ ತೆರವಿನ ಕಠಿಣ ತೀರ್ಮಾನ; ತೀವ್ರ ಮಳೆ ಕೊರತೆ, ಬರಗಾಲದ ಭೀತಿ

• ಉದಯವಾಹಿನಿ, ಬೆಂಗಳೂರು

ವಿಜಯಾನಂದ ಕಾಶಪ್ಪನವರ್ ಬೆಂಬಲಿಗರು, ಅಭಿಮಾನಿಗಳ ಭಾವನೆಯನ್ನು ವರಿಷ್ಠರಿಗೆ ತಿಳಿಸುತ್ತೇನೆ. ಯಾರೂ ಸಹ ಬೆಂಬಲಿಗರ ನಿಯೋಗ ಕರೆದುಕೊಂಡು ಬಂದು ಸಚಿವ ಸ್ಥಾನಕ್ಕೆ ಒತ್ತಡ ಹಾಕಬಾರದು ಎಂದು ಮನವಿ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಶಾಸಕ ವಿಜಯಾನಂದ ಕಾಶಪ್ಪನವರ್ ಅವರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಅವರ ಬೆಂಬಲಿಗರು ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಭಾನುವಾರ ಮನವಿ ಸಲ್ಲಿಸಿದರು. ಅವರ ಬೆಂಬಲಿಗರನ್ನು ಉದ್ದೇಶಿಸಿ ಮುಖ್ಯಮಂತ್ರಿಯವರು ಮಾತನಾಡಿದರು.

ನನಗೂ ಯುವಕರಿಗೆ ಒಳ್ಳೆಯದಾಗಲಿ ಎನ್ನುವ ಅಭಿಲಾಷೆಯಿದೆ. ಪಕ್ಷದ ನಾಯಕರು ಯಾವ ರೀತಿ ನಿರ್ಧಾರ ಮಾಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ಕಾಂಗ್ರೆಸ್ ಪಕ್ಷ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಕೆಲಸ ಮಾಡುತ್ತದೆ. ಮೊದಲ ಸಲ ಗೆದ್ದವರಿಂದ ಹಿಡಿದು 8-9 ಸಲ ಗೆದ್ದವರಿಗೂ ಸಚಿವರಾಗಬೇಕು ಎನ್ನುವ



ಅಭಿಲಾಷೆ ಇದ್ದೇ ಇರುತ್ತದೆ. ಆದರೆ ನಾವು ಪಕ್ಷದ ಚೌಕಟ್ಟಿನಲ್ಲಿ ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ ಹೇಳಿದರು. ದಯವಿಟ್ಟು ಇನ್ನು ಯಾವ ಬೆಂಬಲಿಗರ ನಿಯೋಗವೂ ಸಚಿವ ಸ್ಥಾನ ಬೇಡಿಕೆಯೊಂದಿಗೆ ಬರಬಾರದು ಎಂದು ಮನವಿ ಮಾಡುತ್ತೇನೆ. 2028ಕ್ಕೆ ಪಕ್ಷವನ್ನು ಅಧಿಕಾರಕ್ಕೆ ತರುವುದೇ ನಮ್ಮೆಲ್ಲರ ಗುರಿಯಾಗಬೇಕು. 140 ಜನ ಶಾಸಕರಿಗೂ ಮುಖ್ಯಮಂತ್ರಿಯಾಗಬೇಕು ಎನ್ನುವ ಆಸೆ ಇರುತ್ತದೆ. ಆದರೆ ಆಗುವುದು ಒಬ್ಬರೇ ಅಲ್ಲವೇ ಎಂದರು. 33 ಸಚಿವ ಸ್ಥಾನಗಳಿವೆ. ಅದರಲ್ಲಿ ಜಾತಿ, ಪ್ರದೇಶ ಎಲ್ಲವನ್ನೂ ನೋಡಬೇಕಲ್ಲವೇ? ಇದರ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ನಾನು ಸಹ ಚಿಕ್ಕವಯಸ್ಸಿನಲ್ಲೇ ಮಂತ್ರಿ ಪದವಿ ಪಡೆದವನು. ನನಗೂ ಯುವಕರಿಗೆ ನೀಡಬೇಕು ಎನ್ನುವ ಅಭಿಲಾಷೆಯಿದೆ. ಎಲ್ಲರೂ ತಾಳ್ಮೆಯಿಂದ ಇರಬೇಕು ಎಂದು ತಿಳಿಸಿದರು.

ವಿಜಯಾನಂದ ಕಾಶಪ್ಪನವರ್ ನನ್ನ ಆತ್ಮೀಯ ಸ್ನೇಹಿತರು, ಪರಿಚಯಸ್ಥರು. ಅವರ ಪರವಾಗಿ ಬೆಂಬಲಿಗರು ಬಂದಿರುವುದು ಸಂತೋಷದ ವಿಚಾರ. ಅವರ ತಂದೆಯವರೂ ಸಹ ನನ್ನ ಜೊತೆ ಶಾಸಕರಾಗಿ, ಸಚಿವರಾಗಿದ್ದರು. ಅವರ ತಾಯಿಯವರೂ ಶಾಸಕರಾಗಿದ್ದರು. ಆ ಚುನಾವಣೆಗೆ ನಾನು ಬಂದು ಕೆಲಸ ಮಾಡಿದ್ದೆ ಎಂದು ಹೇಳಿದರು.

ಕಾಶಪ್ಪನವರ್ ಹೋರಾಟ, ಸಂಘಟನೆ, ಪಾದಯಾತ್ರೆ ಎಲ್ಲದರ ಅರಿವು ನಮಗಿದೆ. ಲಿಂಗಾಯತ ಅಭಿವೃದ್ಧಿ ನಿಗಮದ ಜವಾಬ್ದಾರಿ ನೀಡಿ ಸಮಾಜದ ಋಣ ತೀರಿಸಲಿ ಎಂದು ಹೊಣೆ ನೀಡಲಾಯಿತು. ಅವರು ಸಮಾಜದ ಋಣ ತೀರಿಸುತ್ತಿದ್ದಾರೆ ಎಂದರು. ನಿಮ್ಮ ಭಾಗದಲ್ಲಿ ನೀರಾವರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ನಿಮ್ಮಲ್ಲಿ ಮಧ್ಯಪ್ರದೇಶ ಮಾದರಿ ಸ್ಪ್ರಿಂಕ್ಲರ್ ಯೋಜನೆ ಮಾಡಬೇಕು ಎಂದು ಹೇಳಿದ್ದಾರೆ. ಅದರ ಬಗ್ಗೆ ನಾವು ಗಮನ ಹರಿಸುತ್ತೇವೆ. ಇಡೀ ಜಿಲ್ಲೆಯಲ್ಲಿ ಒಗ್ಗಟ್ಟಿನಿಂದ ಇಡೀ ಸಮಾಜವನ್ನು ತೆಗೆದುಕೊಂಡು ಹೋಗುತ್ತಿದ್ದೀರಿ. ಇದೇ ರೀತಿ ಮುಂದುವರೆಯಲಿ ಎಂದು ಸಿಎಂ ಸಲಹೆ ನೀಡಿದರು.

### ಸಿಎಂ ಡಿಕೆಶಿಗೆ ಎದುರಾದ ಆರಂಭಿಕ ಸವಾಲು

ಡಿ.ಕೆ.ಶಿ ಅಧಿಕಾರ ಸ್ವೀಕರಿಸಿದಾಗಿನಿಂದ ಹತ್ತು ಹಲವು ಸವಾಲುಗಳನ್ನೂ ಎದುರಿಸಿದ್ದಾರೆ. ನೂತನ ಸಂಪುಟ ರಚನೆ ಬಳಿಕ ಖಾತೆ ಹಂಚಿಕೆಯಲ್ಲಿ ಸಿಎಂ ಡಿಕೆಶಿಗೆ ದೊಡ್ಡ ಸವಾಲು ಎದುರಾಯಿತು. ಆರಂಭಿಕ ವಿಘ್ನ ಎಂಬಂತೆ ಜಲಸಂಪನ್ಮೂಲ ಇಲಾಖೆ ಹಂಚಿಕೆ ಮಾಡಿದ್ದಕ್ಕೆ ಮುನಿಸಿಕೊಂಡ ಹಿರಿಯ ಸಚಿವ ರಾಮಲಿಂಗಾ ರೆಡ್ಡಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದರು. ಬೆಂಗಳೂರು ನಗರಾಭಿವೃದ್ಧಿ ಖಾತೆ ಮೇಲೆ ಕಣ್ಣಿಟ್ಟಿದ್ದ ರಾಮಲಿಂಗಾ ರೆಡ್ಡಿ ಜಲಸಂಪನ್ಮೂಲ ಖಾತೆ ವಹಿಸಿಕೊಳ್ಳಲ್ಲ ಎಂದು ಪಟ್ಟು ಹಿಡಿದಿದ್ದರು. ಬಳಿಕ ಸಿಎಂ ಡಿ.ಕೆ.ಶಿವಕುಮಾರ್ ಅವರು ಸಚಿವ ರಾಮಲಿಂಗಾ ರೆಡ್ಡಿ ಮನವೊಲಿಕೆ ಮಾಡುವಲ್ಲಿ ಸಫಲರಾದರು.


**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 14,673/Gram 24ct ₹13,450/Gram 22ct ಬೆಳ್ಳಿ: ₹250.00/Gram

# ರೈತರ ಮೇಲೆ ದೌರ್ಜನ್ಯ ಖಂಡಿಸಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಪ್ರತಿಭಟನೆ

• **ಉದಯವಾಹಿನಿ, ಆನೇಕಲ್**

ಸರ್ಜಾಪುರ ಭೂ ಸ್ವಾಧೀನ ವಿರೋಧಿಸಿ ಹಾಗೂ ರೈತರ ಮೇಲೆ ಪೊಲೀಸ್ ದೌರ್ಜನ್ಯ ಖಂಡಿಸಿ ಜುಲೈ 26ರಂದು ಮುತ್ತಾನಲ್ಲೂರಿನಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಬೈಕ್ ರ್ಯಾಲಿ ಮತ್ತು ಪ್ರತಿಭಟನೆ ನಡೆಸಲಾಗುವುದು ಎಂದು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಗೊಟ್ಟಿಗೆರೆ ಮಂಜುನಾಥ್ ತಿಳಿಸಿದರು.

ಜುಲೈ 26ರಂದು ಮುತ್ತಾನಲ್ಲೂರಿನಲ್ಲಿ 5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ರ್ಯಾಲಿ ನಡೆಸಿ ರೈತರ ಹೋರಾಟ ಬೆಂಬಲಿಸಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ರೈತರು ಭೂಮಿಯ ಮಕ್ಕಳು. ಅನ್ನ ನೀಡುವ ರೈತರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿರುವುದು ಖಂಡನೀಯ. ಅಧಿಕಾರವಿದೆ ಎಂದು ರೈತರ ಮೇಲೆ ಹಲ್ಲೆ ನಡೆಸಿದ ಅಧಿಕಾರಿಗಳಿಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಾಗುತ್ತದೆ. ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳನ್ನು ಪತ್ತೆ ಹಚ್ಚಿ ಅವರಿಗೆ ತಕ್ಕ ಪಾಠ ಕಲಿಸಲಾಗುವುದು ಎಂದರು.


ಉದಯವಾಹಿನಿ ಚಿತ್ರ

ರೈತರು ಒಂದು ವರ್ಷದಿಂದ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಸರ್ಜಾಪುರ ಹೋಬಳಿಯಲ್ಲಿ ಭೂಮಿ ಮಾರುಕಟ್ಟೆ ಬೆಲೆ ಎಕರೆಗೆ 10 ಕೋಟಿಯಿಂದ 15 ಕೋಟಿ ಇದೆ. ಆದರೆ ಸರ್ಕಾರ 2.5 ಕೋಟಿ ಪರಿಹಾರ ನೀಡುವುದಾಗಿ ಹೇಳುತ್ತಿದೆ. ಮನೆಯಲ್ಲಿ ಐದಾರು ಮಕ್ಕಳಿದ್ದು ಭಾಗ ಮಾಡಿದರೆ ಸರಿಯಾದ ಹಂಚಿಕೆ ಹಂಚಿಕೆ ಆಗುವುದಿಲ್ಲ ಎಂದು ತಿಳಿಸಿದರು. ಕೃಷಿ ಭೂಮಿ ಕಿತ್ತುಕೊಂಡರೆ ಸಣ್ಣ ಮತ್ತು ಮಧ್ಯಮ ರೈತರ ಪರಿಸ್ಥಿತಿ ಡೋಲಾಯಮಾನ ಆಗುತ್ತದೆ. ಸರ್ಜಾಪುರ ಭಾಗದ ರೈತರ ಸಮಸ್ಯೆಗಳ ಬಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಂಪೂರ್ಣ ಮಾಹಿತಿ ಪಡೆದಿದ್ದು, ಅವರ ನೇತೃತ್ವದಲ್ಲಿಯೇ ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಜೆಡಿಎಸ್ ಮುಖಂಡ ಕೆ.ಪಿ.ರಾಜು ತಿಳಿಸಿದರು. ರೈತರು ಒಂದು ವರ್ಷದಿಂದ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಜೆಡಿಎಸ್ ರಾಜ್ಯ ಪರಿಶಿಷ್ಟ ಜಾತಿ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಪಟಾಪಟ್ ರವಿ, ತಾಲ್ಲೂಕು ಅಧ್ಯಕ್ಷ ದೇವೇಗೌಡ, ಮುಖಂಡರಾದ ನರೇಂದ್ರ ಬಾಬು, ವಿನಯ್ ರೆಡ್ಡಿ, ರಾಜಣ್ಣ, ಮಹೇಶ್, ನಂಜಾರೆಡ್ಡಿ, ಸೋಲೂರು ಮಹೇಶ್ ಉಪಸ್ಥಿತರಿದ್ದರು.

## ಅಕ್ರಮ ಬೀಜ, ಗೊಬ್ಬರ ದಾಸ್ತಾನು ಆರೋಪ: 3 ಜಿಲ್ಲೆಗಳಲ್ಲಿ ಕೃಷಿ ಇಲಾಖೆ ದಾಳಿ

• **ಉದಯವಾಹಿನಿ, ಬೆಂಗಳೂರು**

ಅನಧಿಕೃತವಾಗಿ ಬೀಜ, ರಸಗೊಬ್ಬರ ದಾಸ್ತಾನು, ಮಾರಾಟ ನಿಯಂತ್ರಿಸಲು ಕೃಷಿ ಇಲಾಖೆ ಆಯುಕ್ತರ ಸೂಚನೆ ಮೇರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ನಡೆಸುತ್ತಿದ್ದಾರೆ.ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನೇತೃತ್ವದ ಪ್ರತ್ಯೇಕ ತಂಡಗಳು ರಾಜ್ಯದ ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ವಿವಿಧ ರಸಗೊಬ್ಬರ ಮಾರಾಟ ಕೇಂದ್ರಗಳ ಮೇಲೆ ಅನಧಿಕೃತವಾಗಿ ಸಂಗ್ರಹಿಸಲಾಗಿದ್ದ ಬೀಜ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ವಶಪಡಿಸಿಕೊಂಡಿದ್ದಾರೆ.ಹಾಸನ ಜಿಲ್ಲೆ ಸಾಲಗಾಮೆ ಹೋಬಳಿಯ ಕೊಂಡಜ್ಜಿಕೊಪ್ಪಲುವಿನ ಕಾರ್ತಿಕ ಟ್ರೇಡರ್ಸ್‌ನಲ್ಲಿ ಬೀಜ ಕಾಯ್ದೆ 1966 ಉಲ್ಲಂಘಿಸಿ ಅನುಮತಿ ಇಲ್ಲದೇ ದಾಸ್ತಾನು ಮಾಡಲಾಗಿದ್ದ ಸುಮಾರು 85 ಸಾವಿರ ಮೌಲ್ಯದ 180 ಕೆ.ಜಿ.ಹೈಬ್ರಿಡ್ ಮೆಕ್ಕೆಜೋಳ ಬೀಜಗಳನ್ನು ವಶಕ್ಕೆ ಪಡೆಯಲಾಗಿದೆ.

## ಬಾಹ್ಯಾಕಾಶಕ್ಕೆ ಯಾನ ಮಾಡಿದ ಎರಡನೇ ಭಾರತೀಯ ನಾನು: ಶುಭಾಂಶು ಶುಕ್ಲಾ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಬಾಹ್ಯಾಕಾಶಕ್ಕೆ ಯಾನ ಮಾಡಿದ ಎರಡನೇ ಭಾರತೀಯ ನಾನು. ರಾಕೇಶ್ ಶರ್ಮಾ ಅವರು ಯಾನ ಮಾಡಿದ 41 ವರ್ಷಗಳ ಬಳಿಕ ನಾನು ಹೋಗಿದ್ದು. ಇನ್ನು ಮುಂದೆ ಇಷ್ಟೊಂದು ಅಂತರ ಇರಲಾರದು. ನಿರಂತರ ಅಂತರಿಕ್ಷ ಯಾನ ಆಗುತ್ತಿರಬೇಕು' ಎಂದು ಗಗನಯಾತ್ರಿ, ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಆಶಿಸಿದರು.

ಶುಭಾಂಶು ಶುಕ್ಲಾ ಅವರೇ ಬರೆದ 'ದಿ ಸೆಕೆಂಡ್ ಆರ್ಬಿಟ್' ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 'ರಾಕೇಶ್ ಶರ್ಮಾ ಅವರು ರಷ್ಯಾದಿಂದ ಬಾಹ್ಯಾಕಾಶಕ್ಕೆ ಹೋಗಿದ್ದರು. ಭಾರತದ ನೆಲದಿಂದ ಭಾರತದ ರಾಕೆಟ್‌ನಲ್ಲಿ ಬಾಹ್ಯಾಕಾಶಕ್ಕೆ ಹಾರಿದ ಮೊದಲ ಯಾತ್ರಿ ನಾನು' ಎಂದು ಹೆಮ್ಮೆಪಟ್ಟರು.

'ವರ್ಷದ ಹಿಂದೆ ಇದೇ ದಿನ ಜುಲೈ 4ರಂದು ನಾನು ಭೂಮಿ ಮೇಲಿರಲಿಲ್ಲ. ಆಕಾಶದಲ್ಲಿ ತೇಲುತ್ತಿದ್ದೆ. ಮಲಗಲು ಬೆಡ್ ರೂಂ, ಬೆಡ್‌ಗಳೇ ಇಲ್ಲದೆ, ಹೇಗೆ ಬೇಕಾದರೂ ಮಲಗಿಕೊಳ್ಳಬಹುದಾದ ಸನ್ನಿವೇಶದಲ್ಲಿದ್ದೆ. ಚಳಿಯ ಅನುಭವವಾಗುತ್ತಿತ್ತು. ಬ್ಯಾಗ್ ಒಳಗೆ ಕಾಲುಗಳನ್ನು ತುರುಕಿಸಿ ಬೆಡ್ ಶೀಟ್‌ನ ಅಡಿಯಲ್ಲಿರುತ್ತಿದ್ದೆ' ಎಂದು ಅನುಭವ ಹಂಚಿಕೊಂಡರು.ಶುಕ್ಲಾ ಅವರೊಂದಿಗೆ ಅಂತರಿಕ್ಷ ಪಯಣದಲ್ಲಿದ್ದ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಮಾತನಾಡಿ, 'ಗಗನಯಾನ ಮಾಡಲಾಗದೇ ಇದ್ದರೂ ಪುಸ್ತಕ ಬರೆಯುವಂತೆ ಶುಕ್ಲಾ ಜೊತೆಗೆ ಕೆಲಸ ಮಾಡುತ್ತಿದ್ದಾಗ ಅವನಿಗೆ ಸಲಹೆ ನೀಡುತ್ತಿದ್ದೆ. ಶುಕ್ಲಾ ಗಗನಯಾತ್ರೆಯನ್ನೂ ಮಾಡಿ. ಪುಸ್ತಕವನ್ನೂ ಬರೆದು ನನ್ನ ಸಲಹೆಯನ್ನು ಸಾಕಾರಗೊಳಿಸಿದ್ದಾನೆ' ಎಂದು ನೆನಪು ಮಾಡಿಕೊಂಡರು. ಕೃತಿ ಜನಾರ್ಪಣೆ ಮಾಡಿದ ನಿವೃತ್ತ ಏರ್ ಕಮೊಡೋರ್ ರವೀಶ್ ಮಲ್ಹೋತ್ರಾ, ಎಲ್ಲಾ ಶಾಲಾ ಕಾಲೇಜುಗಳ ಗ್ರಂಥಾಲಯದಲ್ಲಿ ಇರಬೇಕಾದ ಮಹತ್ವದ ಪುಸ್ತಕ ದಿ ಸೆಕೆಂಡ್ ಆರ್ಬಿಟ್' ಎಂದು ಅಭಿಪ್ರಾಯಪಟ್ಟರು.

ಮಾಜಿ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ. ವಿಜಯರಾಘವನ್, ಭಾರತೀಯ ವಾಯುಪಡೆಯ ತರಬೇತಿ ಕಮಾಂಡ್ ಏರ್‌ಮಾರ್ಷಲ್ ಸೀತಾಪಳ್ಳಿ ಶ್ರೀನಿವಾಸನ್, ಜವಾಹರ್ ಲಾಲ್ ನೆಹರೂ ತಾರಾಲಯದ ನಿರ್ದೇಶಕ ಬಿ.ಆರ್. ಗುರುಪ್ರಸಾದ್ ಇದ್ದರು.2025ರ ಜುಲೈ 4ರಂದು ಅಂತರಿಕ್ಷದಲ್ಲಿ ಶುಭಾಂಶು ಶುಕ್ಲಾ ಸೆರೆ ಹಿಡಿದ ಚಿತ್ರವನ್ನೇ ಅತಿಥಿಗಳಿಗೆ ಗೌರವ ಸಮರ್ಪಣೆಯಾಗಿ ನೀಡಲಾಯಿತು. ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು.

## ಆರೋಪ ಮಾಡುವುದು ವಿರೋಧ ಪಕ್ಷದ ಕೆಲಸ, ಸರ್ಕಾರವಾಗಿ ಎಲ್ಲರಿಗೂ ನ್ಯಾಯ ದೊರಕಿಸುವುದು ನಮ್ಮ ಜವಾಬ್ದಾರಿ: ಡಿ ಕೆ ಶಿವಕುಮಾರ್


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಆರೋಪ ಮಾಡುವುದು ಪ್ರತಿಪಕ್ಷದ ಕೆಲಸ. ಸರ್ಕಾರವಾಗಿ ಎಲ್ಲರಿಗೂ ನ್ಯಾಯ ದೊರೆಯುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ತಮ್ಮ ಮತದಾನದ ಹಕ್ಕನ್ನು ಕಾಪಾಡಿಕೊಳ್ಳುವಂತೆ ಎಲ್ಲಾ ಮತದಾರರಿಗೂ ನಾವು ಮನವಿ ಮಾಡಿದ್ದೇವೆ ಎಂದು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಇಂದು ದೇವನಹಳ್ಳಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಚುನಾವಣಾ ಆಯೋಗವು ಕಾನೂನು ಮತ್ತು ನಿಗದಿತ ಪ್ರಕ್ರಿಯೆಯ ಪ್ರಕಾರವೇ ಕಾರ್ಯನಿರ್ವಹಿಸುತ್ತಿದೆ. ನಮ್ಮ ಪಾಲಿಗೆ ಅಗತ್ಯವಿರುವ ಕಡೆ ಪ್ರತಿಭಟನೆಗಳನ್ನು ನಡೆಸುತ್ತೇವೆ. ಆದರೆ ಅವುಗಳನ್ನು ಕಾನೂನುಬದ್ಧ ಹಾಗೂ ಪ್ರಜಾಪ್ರಭುತ್ವದ ರೀತಿಯಲ್ಲಿಯೇ ನಡೆಸುತ್ತೇವೆ ಎಂದು ಹೇಳಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇವನಹಳ್ಳಿಯ ಜಿಲ್ಲಾಡಳಿತ ಭವನದ ಆವರಣದಲ್ಲಿ ಇಂದು 14 ಅಡಿ ಎತ್ತರದ ಡಾ. ಬಿ.ಆರ್. ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಉದ್ಘಾಟಿಸಿ ಅನಾವರಣಗೊಳಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಚಿವ ಕೆ.ಎಚ್. ಮುನಿಯಪ್ಪ ಅವರ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗೆ ಪೊಲೀಸ್ ಗೌರವ ವಂದನೆ ಸಲ್ಲಿಸಲಾಯಿತು.

## ಭಜನ-ಪ್ರವಚನ-ಸಂಕೀರ್ತನ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ಮತ್ತು ಶ್ರೀ ಮಾತಾಜಿ ಅಲಸೂರಮ್ಮ ರಾಘವೇಂದ್ರ ಸೇವಾ ಟ್ರಸ್ಟ್ ಸೇವಾ ಟ್ರಸ್ಟ್ ಇವುಗಳ ಜಂಟಿ ಆಶ್ರಯದಲ್ಲಿ ಜುಲೈ 7 ರಿಂದ 10ರ ವರೆಗೆ ಜರುಗುವ ಧಾರ್ಮಿಕ/ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ರೀತಿ ಇವೆ : ಭಜನಾ ಕಾರ್ಯಕ್ರಮ (ಪ್ರತಿದಿನ ಸಂಜೆ 6 ರಿಂದ 7) ಜುಲೈ 7-ವಿದ್ಯಾರಣ್ಯಪುರದ ಶ್ರೀಸುಶಮೀಂದ್ರ ಭಜನಾ ಮಂಡಳಿ, ಜುಲೈ 8-ಜಕ್ಕೂರಿನ ಶ್ರೀ ವಿಜಯ ವಿಠಲ ಭಜನಾ ಮಂಡಳಿ, ಜುಲೈ 9-ಬೊಮ್ಮಸಂದ್ರದ ಶ್ರೀ ವಿಜಯ ವಿಠಲ ಭಜನಾ ಮಂಡಳಿಯ ಸದಸ್ಯರಿಂದ ಭಜನಾಮೃತ ನಡೆಯಲಿದೆ.

**ಪ್ರವಚನ ಕಾರ್ಯಕ್ರಮ (ಪ್ರತಿದಿನ ಸಂಜೆ 7 ರಿಂದ 8) :** ಜುಲೈ 7 ರಿಂದ 9ರ ವರೆಗೆ ಶ್ರೀ ಕಂಬಾಲೂರು ವಿಜಯವಿಠಲಾಚಾರ್ ಭಾಗವತ ಸಾರೋದ್ಧಾರ ವಿಷಯವಾಗಿ ಧಾರ್ಮಿಕ ಪ್ರವಚನ ನೀಡಲಿದ್ದಾರೆ. **ಹರಿನಾಮ ಸಂಕೀರ್ತನೆ :** ಜುಲೈ 10, ಶುಕ್ರವಾರ ಸಂಜೆ 6-30ಕ್ಕೆ ಹರಿನಾಮ ಸಂಕೀರ್ತನೆ. ಶ್ರೀಮತಿ ರಂಜಿತಾ ಪ್ರಸಾದ್ ಗಾಯನಕ್ಕೆ ಶ್ರೀಎಂ.ಎನ್. ಸತ್ಯನಾರಾಯಣ ಪಿಟೀಲು ವಾದನದಲ್ಲಿ ಮತ್ತು ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಮೃದಂಗ ವಾದನದಲ್ಲಿ ಸಹಕರಿಸಲಿದ್ದಾರೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಮುಖ್ಯರಸ್ತೆ, 3ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು-560097

# ಅನ್ಯ ಉದ್ದೇಶಕ್ಕೆ ಕುಡಿಯುವ ನೀರು ಬಳಕೆ ನಿಷೇಧ

## ಹೊಸ ಆದೇಶಗಳನ್ನು ಉಲ್ಲಂಘಿಸಿದರೆ 5000 ರೂ. ದಂಡ ವಿಧಿಸುವುದಾಗಿ ಘೋಷಿಸಿದೆ

• **ಉದಯವಾಹಿನಿ, ಬೆಂಗಳೂರು**

ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಈ ಬಾರಿ ಮುಂಗಾರು ಮಳೆ ಕೈಕೊಟ್ಟಿದ್ದು, ನೀರಿನ ಕೊರತೆ ಹಿನ್ನೆಲೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೇಸಿಗೆಯಲ್ಲಿ ಜಾರಿಗೊಳಿಸುವ ಕಟ್ಟುನಿಟ್ಟಿನ ನಿಯಮಗಳನ್ನು ಈ ಬಾರಿ ಮಳೆಗಾಲದಲ್ಲಿಯೇ ಜಾರಿಗೊಳಿಸಿದೆ.

ಕುಡಿಯುವ ನೀರನ್ನು ಈಜುಕೊಳಗಳಿಗೆ, ವಾಹನಗಳ ಸ್ವಚ್ಛತೆಗೆ, ಕೈತೋಟಕ್ಕೆ, ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಹಾಗೂ ಮನೋರಂಜನ ಕಾರಂಜಿಗಳಿಗೆ ಬಳಸುವಂತಿಲ್ಲ ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಆದೇಶ ಹೊರಡಿಸಿದೆ. ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳು ಈಜುಕೊಳಗಳಿಗೆ ಕುಡಿಯುವ ನೀರಿನ ಬಳಕೆಯನ್ನು ನಿಷೇಧಿಸಿದ್ದು, ವಾಹನಗಳು ಮತ್ತು ಬೀದಿಗಳನ್ನು ತೊಳೆಯಲು ಕುಡಿಯುವ ನೀರಿನ ಬಳಕೆಯನ್ನು ನಿಷೇಧಿಸಿದೆ ಮತ್ತು ಏರೇಟರ್‌ಗಳ ಬಳಕೆಯನ್ನು ಕಡ್ಡಾಯಗೊಳಿಸಿದೆ.

ಮಂಡಳಿಯು ತನ್ನ ಹೊಸ ಆದೇಶಗಳನ್ನು ಉಲ್ಲಂಘಿಸಿದರೆ 5000 ರೂ. ದಂಡ ವಿಧಿಸುವುದಾಗಿ ಘೋಷಿಸಿದೆ. ಕಠಿಣ ಬೇಸಿಗೆಯನ್ನು ಎದುರಿಸಲು ಸಾಮಾನ್ಯವಾಗಿ ಮಾರ್ಚ್‌ನಲ್ಲಿ ಘೋಷಿಸಲಾಗುವ ಈ ಕ್ರಮಗಳನ್ನು ಈ ವರ್ಷ ಮಳೆಗಾಲದಲ್ಲಿಯೇ ಬಿಡಬ್ಲ್ಯೂಎಸ್‌ಎಸ್‌ಬಿ ಘೋಷಿಸಿದೆ.

ಆದರೆ ಈ ಕ್ರಮಗಳು ಜಲಮಂಡಳಿಯಲ್ಲಿ ಹೆಚ್ಚುತ್ತಿರುವ ಕಳವಳಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮನೆಗಳು, ಅಪಾರ್ಟ್‌ಮೆಂಟ್‌ಗಳು, ವಾಣಿಜ್ಯ

> ನೀರಿನ ಸರಿಯಾದ ನಿರ್ವಹಣೆ ಮತ್ತು ಸಂರಕ್ಷಣೆಯನ್ನು ಉತ್ತೇಜಿಸುವ ಉದ್ದೇಶದಿಂದ ಮೂರು ಪ್ರಮುಖ ನಿಯಮಗಳನ್ನು ಜಾರಿಗೊಳಿಸಲಾಗಿದೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ

ಕಟ್ಟಡಗಳು, ಸರ್ಕಾರಿ ಕಚೇರಿಗಳು, ಹೋಟೆಲ್‌ಗಳು, ಕೈಗಾರಿಕೆಗಳು ಸೇರಿದಂತೆ ನೀರು ಬಳಸುವ ಎಲ್ಲಾ ಕಟ್ಟಡಗಳಲ್ಲಿ ಏರೇಟರ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ನೀರಿನ ಬಳಕೆಯನ್ನು ಶೇ.30 ರಿಂದ 50ರವರೆಗೆ ಕಡಿಮೆ ಮಾಡಬಹುದಾಗಿದ್ದು, ನೀರಿನ ಬಳಕೆಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

ವಾಹನ ತೊಳೆಯುವುದು, ಉದ್ಯಾನಗಳಿಗೆ ನೀರು ಹಾಯಿಸುವುದು, ರಸ್ತೆ ಹಾಗೂ ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸುವುದು, ಕಟ್ಟಡ ನಿರ್ಮಾಣ ಕಾಮಗಾರಿಗಳು ಸೇರಿದಂತೆ ಕುಡಿಯುವ ನೀರಲ್ಲದ ಉದ್ದೇಶಗಳಿಗೆ ಕುಡಿಯುವ ನೀರನ್ನು ಬಳಸುವುದನ್ನು ನಿಷೇಧಿಸಲಾಗಿದೆ. ಇಂತಹ ಅಗತ್ಯಗಳಿಗೆ ಕಡ್ಡಾಯವಾಗಿ ಸಂಸ್ಕರಿತ ನೀರನ್ನೇ ಬಳಸಬೇಕು ಎಂದು ಸೂಚಿಸಲಾಗಿದೆ.


ಉದಯವಾಹಿನಿ ಚಿತ್ರ

### ನೀರಿನ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕ್ರಮ

ನಗರದಲ್ಲಿ ಪ್ರತಿ ಹನಿ ನೀರಿನ ಜವಾಬ್ದಾರಿಯುತ ಬಳಕೆಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು, ಕುಡಿಯುವ ನೀರಿನ ಅನಗತ್ಯ ಬಳಕೆಯನ್ನು ತಡೆಯಲು ಮತ್ತು ದೀರ್ಘಕಾಲೀನ ನೀರಿನ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

● ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮರ್ಪಕ ನಿರ್ವಹಣೆ ಹಾಗೂ ● ನೀರಿನ ಮಿತವ್ಯಯ ಉತ್ತೇಜನಕ್ಕೆ ಜಲಮಂಡಳಿಯಿಂದ ಮೂರು ಮಹತ್ವದ ಆದೇಶ. ● ಎಲ್‌ನಿನೋ ಹಿನ್ನೆಲೆ ನೀರಿನ ಸಂರಕ್ಷಣೆಗೆ ನಾಗರಿಕರ ಸಹಕಾರ ಅಗತ್ಯ ಎಂದ ಬೆಂಗಳೂರು ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳ

**1** ಆದೇಶ ಉಲ್ಲಂಘಿಸಿದರೆ 5 ಸಾವಿರ ದಂಡ

**2** ನೀರಿನ ದುರ್ಬಳಕೆಗೆ ನಿರ್ಬಂಧ

**3** ಏರೇಟರ್ ಅಳವಡಿಕೆ ಕಡ್ಡಾಯ

ಕುಡಿಯುವ ನೀರಿನ ದುರ್ಬಳಕೆಗೆ ನಿರ್ಬಂಧ

### ನಿಯಮ ಉಲ್ಲಂಘಿಸಿದರೆ ದಂಡ

ಈ ಆದೇಶಗಳನ್ನು ಉಲ್ಲಂಘಿಸುವವರ ವಿರುದ್ಧ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ1964ರ ಅನ್ವಯ ಜಲಮಂಡಳಿ ಸರಬರಾಜು ಮಾಡುತ್ತಿರುವ ನೀರಿನ ಪ್ರಮಾಣದಲ್ಲಿ ಶೇಕಡ 50 ರವರೆಗೆ ಕಡಿತಗೊಳಿಸಿ 5,000 ದಂಡ ವಿಧಿಸಲಾಗುವುದು. ಉಲ್ಲಂಘನೆ ಮುಂದುವರಿದಲ್ಲಿ ಪ್ರತಿದಿನ 500 ಹೆಚ್ಚುವರಿ ದಂಡ ವಿಧಿಸುವುದರ ಜೊತೆಗೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಕುಡಿಯುವ ನೀರು ಪ್ರತಿಯೊಬ್ಬರಿಗೂ ಸೇರಿದ ಅಮೂಲ್ಯ ನೈಸರ್ಗಿಕ ಸಂಪತ್ತು. ಅದರ ಸಂರಕ್ಷಣೆ ಕೇ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಇಂದಿನ ಮಿತವ್ಯಯವೇ ನಾಳಿನ ನೀರಿನ ಭದ್ರತೆಗೆ ಭದ್ರ ಬುನಾದಿಯಾಗಲಿದೆ. ಆದ್ದರಿಂದ ಪ್ರತಿಯೊಬ್ಬರೂ ನೀರನ್ನು ಜವಾಬ್ದಾರಿಯುತವಾಗಿ ಬಳಸಿ, ಏರೇಟರ್ ಅಳವಡಿಸಿ, ಕುಡಿಯುವ ನೀರಿನ ದುರ್ಬಳಕೆಯನ್ನು ತಪ್ಪಿಸಿ ಜಲ ಸಂರಕ್ಷಣೆಯ ಜನಾಂದೋಲನಕ್ಕೆ ಕೈಜೋಡಿಸಬೇಕು. ನಾಗರಿಕರ ಸಹಭಾಗಿತ್ವದಿಂದಲೇ ಬೆಂಗಳೂರಿನ ನೀರಿನ ಭವಿಷ್ಯವನ್ನು ಇನ್ನಷ್ಟು ಸುರಕ್ಷಿತಗೊಳಿಸಲು ಸಾಧ್ಯ. ಸಾರ್ವಜನಿಕರು, ಸಂಘ ಸಂಸ್ಥೆಗಳು ಈ ನಿಟ್ಟಿನಲ್ಲಿ ಜಲಮಂಡಳಿ ಜೊತೆ ಕೈಜೋಡಿಸಬೇಕು, ಎಂದು ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳ ಮನವಿ ಮಾಡಿದ್ದಾರೆ.

### ಏರೇಟರ್ ಅಳವಡಿಕೆ ಕಡ್ಡಾಯ

ಮನೆಗಳು, ಅಪಾರ್ಟ್‌ಮೆಂಟ್‌ಗಳು, ವಾಣಿಜ್ಯ ಕಟ್ಟಡಗಳು, ಸರ್ಕಾರಿ ಕಚೇರಿಗಳು, ಹೋಟೆಲ್‌ಗಳು, ಕೈಗಾರಿಕೆಗಳು ಸೇರಿದಂತೆ ನೀರು ಬಳಸುವ ಎಲ್ಲಾ ಕಟ್ಟಡಗಳಲ್ಲಿ ಏರೇಟರ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ನೀರಿನ ಬಳಕೆಯನ್ನು ಶೇ.30 ರಿಂದ 50ರವರೆಗೆ ಕಡಿಮೆ ಮಾಡಬಹುದಾಗಿದ್ದು, ನೀರಿನ ಬಳಕೆಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

### ಈಜುಕೊಳಗಳಿಗೆ ಕುಡಿಯುವ ನೀರಿನ ಬಳಕೆ ನಿಷೇಧ



ನಗರದಲ್ಲಿನ ಖಾಸಗಿ ಹಾಗೂ ಸಾರ್ವಜನಿಕ ಈಜುಕೊಳಗಳನ್ನು ಕುಡಿಯುವ ನೀರಿನಿಂದ ತುಂಬಿಸುವುದನ್ನು ನಿಷೇಧಿಸಲಾಗಿದೆ. ಈಜುಕೊಳಗಳಿಗೆ ಅಗತ್ಯವಿರುವ ನೀರನ್ನು ಸಂಸ್ಕರಿತ ನೀರು ಅಥವಾ ಇತರೆ ಪರ್ಯಾಯ ಮೂಲಗಳಿಂದಲೇ ಬಳಸುವಂತೆ ಸೂಚಿಸಲಾಗಿದೆ.

# ಅಕ್ರಮ ಬೀಜ, ಗೊಬ್ಬರ ದಾಸ್ತಾನು ಆರೋಪ:3 ಜಿಲ್ಲೆಗಳಲ್ಲಿ ಕೃಷಿ ಇಲಾಖೆ ದಾಳಿ

• **ಉದಯವಾಹಿನಿ, ಬೆಂಗಳೂರ**

ಅನಧಿಕೃತವಾಗಿ ಬೀಜ, ರಸಗೊಬ್ಬರ ದಾಸ್ತಾನು, ಮಾರಾಟ ನಿಯಂತ್ರಿಸಲು ಕೃಷಿ ಇಲಾಖೆ ಆಯುಕ್ತರ ಸೂಚನೆ ಮೇರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ನಡೆಸುತ್ತಿದ್ದಾರೆ.
ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನೇತೃತ್ವದ ಪ್ರತ್ಯೇಕ ತಂಡಗಳು ರಾಜ್ಯದ ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ವಿವಿಧ ರಸಗೊಬ್ಬರ ಮಾರಾಟ ಕೇಂದ್ರಗಳ ಮೇಲೆ ಅನಧಿಕೃತವಾಗಿ ಸಂಗ್ರಹಿಸಲಾಗಿದ್ದ ಬೀಜ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ವಶಪಡಿಸಿಕೊಂಡಿದ್ದಾರೆ.

ಹಾಸನ ಜಿಲ್ಲೆ ಸಾಲಗಾಮೆ ಹೋಬಳಿಯ ಕೊಂಡಜ್ಜಿಕೊಪ್ಪಲುವಿನ ಕಾರ್ತಿಕ ಟ್ರೇಡರ್ಸ್‌ನಲ್ಲಿ ಬೀಜ ಕಾಯ್ದೆ 1966 ಉಲ್ಲಂಘಿಸಿ ಅನುಮತಿ ಇಲ್ಲದೇ ದಾಸ್ತಾನು ಮಾಡಲಾಗಿದ್ದ ಸುಮಾರು 85 ಸಾವಿರ ಮೌಲ್ಯದ 180 ಕೆ.ಜಿ.ಹೈಬ್ರಿಡ್ ಮೆಕ್ಕೆಜೋಳ ಬೀಜಗಳನ್ನು ವಶಕ್ಕೆ ಪಡೆಯಲಾಗಿದೆ.

ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ ಪುಷ್ಪಗಿರಿ ಅಕ್ರೋ ಕೇಂದ್ರದಲ್ಲಿ ಅನಧಿಕೃತವಾಗಿ ಸಂಗ್ರಹಿಸಿದ್ದ ಸುಮಾರು 12 ಸಾವಿರ ರೂ.ಮೌಲ್ಯದ 30 ಕೆ.ಜಿ.ಹೈಬ್ರಿಡ್ ಮೆಕ್ಕೆಜೋಳ ಹಾಗೂ ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿಯ ಮದಿಹಳ್ಳಿಯ ಶ್ರೀವೆಂಕಟೇಶ್ವರ ಟ್ರೇಡರ್ಸ್‌ನಲ್ಲಿ ಕಾನೂನು ಉಲ್ಲಂಘಿಸಿ ದಾಸ್ತಾನು ಮಾಡಲಾಗಿದ್ದ ಸುಮಾರು 1.77 ಲಕ್ಷ ಮೌಲ್ಯದ 88 ಚೀಲ ಯೂರಿಯಾ, ಪಾಸ್ಕೋ ಜಿಪ್ಸಮ್ ಗ್ರಾನ್ಯುಲ್ ವಶಪಡಿಸಿಕೊಂಡಿದ್ದಾರೆ.


ಉದಯವಾಹಿನಿ ಚಿತ್ರ

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಮಿಡಗೇಶಿ ಹೋಬಳಿಯ ಹಸಿರು ಹೈಟೆಕ್ ಸೀಡ್ಸ್ ಕೇಂದ್ರದಲ್ಲಿ ಅನಧಿಕೃತವಾಗಿ ದಾಸ್ತಾನು ಮಾಡಲಾಗಿದ್ದ ಸುಮಾರು 86 ಸಾವಿರ ಮೌಲ್ಯದ 22 ಲೀಟರ್ ಸೂಕ್ಷ್ಮ ಪೋಷಕಾಂಶ ಮಿಶ್ರಣವನ್ನು ವಶಪಡಿಸಿಕೊಳ್ಳಲಾಗಿದೆ.

ಮಂಡ್ಯ ತಾಲ್ಲೂಕಿನ ಇಂದುವಾಳದಲ್ಲಿ ಅನಧಿಕೃತವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 300 ಚೀಲ ಎನ್.ಎಫ್.ಎಲ್.ಯೂರಿಯಾವನ್ನು ಮಂಡ್ಯದ ಕೃಷಿ ಅಧಿಕಾರಿಗಳು ಶನಿವಾರ ಜುಲೈ 4 ರಾತ್ರಿ ವಶಪಡಿಸಿಕೊಂಡಿದ್ದಾರೆ. ಬೀಜ.ರಸಗೊಬ್ಬರ ಮಾರಾಟಗಾರರು ನಿಯಮಬಾಹಿರವಾಗಿ ಚಟುವಟಿಕೆಗಳನ್ನು ನಡೆಸುತ್ತಿರುವುದು ಕಂಡು ಬಂದರೆ ಕೃಷಿ ಇಲಾಖೆಯು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದು ಎಂದು ಕೃಷಿ ಇಲಾಖೆ ಆಯುಕ್ತ ಡಾ.ಬಿ.ಸಿ.ಸತೀಶ್ ತಿಳಿಸಿದ್ದಾರೆ.

# ಬೀದಿಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆ ನಿಲ್ಲಿಸಲು ಆಗ್ರಹಿಸಿ ಪ್ರತಿಭಟನೆ

• **ಉದಯವಾಹಿನಿ, ಬೆಂಗಳೂರು**

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಬೀದಿಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆ ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಂಗಳೂರು ಜಿಲ್ಲಾ ಬೀದಿ ಬದಿ ವ್ಯಾಪಾರಿಗಳ ಸಂಘದ (ಬಿಬಿವಿಎಸ್) ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಪಾದಚಾರಿಗಳ ಸುಗಮ ಸಂಚಾರ ಹಾಗೂ ಸುರಕ್ಷತೆಗಾಗಿ ಒತ್ತುವರಿ ತೆರವು ಕಾರ್ಯಾಚರಣೆಯಿಂದ ವ್ಯಾಪಾರಿಗಳು ಬೀದಿಗೆ ಬಿದ್ದಿದ್ದಾರೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಸಂಘಟನೆಯ ರಾಜ್ಯ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಮಾತನಾಡಿ, '2014ರ ಬೀದಿಬದಿ ವ್ಯಾಪಾರಿಗಳ ಸಂರಕ್ಷಣೆ ಮತ್ತು ಜೀವನೋಪಾಯ ಕಾಯ್ದೆಯನ್ನು ಸರ್ಮಪಕವಾಗಿ ಜಾರಿಗೊಳಿಸುವ ಮುನ್ನವೇ ಕಾಯ್ದೆ ಉಲ್ಲಂಘಿಸಿ ದಾಳಿ ನಡೆಸಲಾಗಿದೆ. ಇದರಿಂದ ತಲೆಮಾರುಗಳಿಂದ ಬೀದಿಬದಿ ವ್ಯಾಪಾರವನ್ನೇ ನಂಬಿ ಬದುಕುತ್ತಿದ್ದವರು ಆತಂಕಕ್ಕೆ ಒಳಗಾಗಿದದ್ದಾರೆ. ತಕ್ಷಣ ಕಾರ್ಯಾಚರಣೆ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ಬೀದಿಬದಿ ವ್ಯಾಪಾರಿಗಳ ಸಮೀಕ್ಷೆ ಮಾಡಿ, ಗುರುತಿನ ಚೀಟಿ ನೀಡಬೇಕು. ಪರ್ಯಾಯ ವ್ಯವಸ್ಥೆ ಮಾಡದೆ ತೆರವು ಮಾಡಿಸಬಾರದು.

ಈಗಾಗಲೇ ತೆರವುಗೊಳಿಸಿದ ವ್ಯಾಪಾರಿಗಳಿಗೆ ಆದ ನಷ್ಟವನ್ನು ಜಿಬಿಎ ಭರಿಸಬೇಕು. ವಶಪಡಿಸಿಕೊಂಡಿರುವ ವಸ್ತು ಮತ್ತು ಪದಾರ್ಥಗಳನ್ನು ಹಿಂತಿರುಗಿಸಬೇಕು ಎಂದು ಮನವಿ ಮಾಡಿದರು.

ಸಿಐಟಿಯು ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಸುನಿಲ್ ಜೆ.ಪಿ ಮಾತನಾಡಿ, ಬಟ್ಟೆ, ಹೂವು, ಹಣ್ಣು, ತರಕಾರಿ ಸೇರಿದಂತೆ ಇತರೆ ವಸ್ತುಗಳನ್ನು ಮಾರಾಟ ಮಾಡಿ ಸಾವಿರಾರು ವ್ಯಾಪಾರಿಗಳು ಜೀವನ ನಡೆಸುತ್ತಿದ್ದಾರೆ.

ಕಾರ್ಯಾಚರಣೆಗೂ ಮುನ್ನ ನೋಟಿಸ್ ನೀಡದೆ ವ್ಯಾಪಾರಿಗಳ ಮೇಲೆ ದೌರ್ಜನ್ಯ ಮಾಡಿದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು. ಪ್ರತಿಭಟನೆಯಲ್ಲಿ ಬೆಂಗಳೂರು ಜಿಲ್ಲಾ ಕಟ್ಟಡ ಸಂಘಟನೆಯ ಮುಖಂಡರಾದ ಕೆ.ಎಸ್. ಲಕ್ಷ್ಮಿ, ಬೀದಿ ಬದಿ ಸಂಘಟನೆಯ ಮುಖಂಡರಾದ ಬಸಮ್ಮ, ರವಿಚಂದ್ರನ್, ರುದ್ರಾ ಅಂಬಿಕಾ, ಪಿ. ನಾಗರಾಜ್, ಶಶಿಕಲಾ, ದೇವಿಕಾ, ಮುರುಗ ಭಾಗವಹಿಸಿದ್ದರು.

## ಕನಿಷ್ಠ ವೇತನ ಹೆಚ್ಚಳ ಮರುಪರಿಷ್ಕರಣೆ ಬೇಡ ಎಂದು ಸಿಐಟಿಯು ಮನವಿ

• **ಉದಯವಾಹಿನಿ, ಬೆಂಗಳೂರ**

'ರಾಜ್ಯದಲ್ಲಿ ಕನಿಷ್ಠ ವೇತನ ಹೆಚ್ಚಳದ ಅಂತಿಮ ಅಧಿಸೂಚನೆಯನ್ನು ಮರುಪರಿಶೀಲಿಸಬಾರದು' ಎಂದು ಸಿಐಟಿಯು ರಾಜ್ಯ ಸಮಿತಿಯು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಅವರನ್ನು ಶನಿವಾರ ಭೇಟಿ ಮಾಡಿ ಮನವಿ ಸಲ್ಲಿಸಿತು. 'ಈಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಕನಿಷ್ಠ ವೇತನ ಹೆಚ್ಚಳ ಆದೇಶವನ್ನು ಮರುಪರಿಷ್ಕರಿಸುವ ಬಗ್ಗೆ ತೀರ್ಮಾನವಾಗಿರುವುದು ಆಘಾತಕಾರಿ ವಿಚಾರ. ಇಂತಹ ಯತ್ನಗಳನ್ನು ಸರ್ಕಾರವು ತಕ್ಷಣವೇ ನಿಲ್ಲಿಸಿ, ಕಾರ್ಮಿಕರ ಪರವಾಗಿ ನಿಲ್ಲಬೇಕು' ಎಂದು ಸಮಿತಿಯು ಒತ್ತಾಯಿಸಿದೆ.'ರಾಜ್ಯದಲ್ಲಿ 2017-18ರಿಂದಲೇ ಕನಿಷ್ಠ ವೇತನ ಪರಿಷ್ಕರಣೆ ಆಗಿರಲಿಲ್ಲ. ದೀರ್ಘಕಾಲದ ಬಳಿಕ 39 ನಿಗದಿಪಡಿಸಿದ ಉದ್ಯೋಗಗಳ ವೇತನವನ್ನು ಪರಿಷ್ಕರಿಸಲಾಗಿದೆ. ಆದರೆ, ಉದ್ಯಮಿಗಳಲ್ಲಿ ಕೆಲವರು ಇದನ್ನು ಜಾರಿಗೆ ತರಲು ಹಿಂದೇಟು ಹಾಕುತ್ತಿದ್ದಾರೆ. ಅದಕ್ಕೆ ಮಣಿಯಬಾರದು' ಎಂದು ಸಮಿತಿ ಕೋರಿದೆ. ಈ ಪರಿಷ್ಕರಣೆಯಿಂದಾಗಿ ಕೆಪಿಟಿಸಿಎಲ್‌ನಂತಹ ಪ್ರಮುಖ ಸಂಸ್ಥೆಗಳು, ಮಂಡಳಿಗಳು ಹಾಗೂ ಖಾಸಗಿ ಉದ್ಯೋಗದಾತರು ಹೆಚ್ಚಳದ ಹೊರೆಯನ್ನು ಈಗಾಗಲೇ ತಮ್ಮ ಗ್ರಾಹಕರಿಗೆ ವರ್ಗಾಯಿಸಿದ್ದಾರೆ.

# ಅಮಿತ್ ಶಾ, ಮುಖ್ಯ ಚುನಾವಣಾ ಆಯುಕ್ತರ ಭೇಟಿಗೆ ಹೆಚ್.ಡಿ.ಕುಮಾರಸ್ವಾಮಿ ಮುಂದು..!

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮಗಳು ನಡೆದಿವೆ ಎಂದು ಆರೋಪಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಈ ಕುರಿತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಸೋಮವಾರ ದೆಹಲಿಯಲ್ಲಿ ಭೇಟಿ ಮಾಡಿ ದೂರು ಸಲ್ಲಿಸುವುದಾಗಿ ತಿಳಿಸಿದ್ದಾರೆ.


ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಇದುವರೆಗೆ ನಡೆದಿರುವ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಪಡಿಸಿ, ನಂತರ ಪಾರದರ್ಶಕವಾಗಿ ಹೊಸದಾಗಿ ಪರಿಷ್ಕರಣೆ ನಡೆಸುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸುವುದಾಗಿ ಹೇಳಿದರು.

ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಮಧ್ಯಪ್ರವೇಶ ಕೋರುವ ಉದ್ದೇಶದಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೂ ಭೇಟಿ ಮಾಡುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಕರ್ನಾಟಕದ ಹಲವು ಕೇಂದ್ರ ಸಚಿವರು ಈಗಾಗಲೇ ಪ್ರಕ್ರಿಯೆ ನಡೆಯುತ್ತಿರುವ ರೀತಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಹೊರಗಿನ ಅಧಿಕಾರಿಯನ್ನು ಪ್ರಕ್ರಿಯೆಯ ಉಸ್ತುವಾರಿಯಾಗಿ ನೇಮಿಸುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡುವ ಸಾಧ್ಯತೆಯೂ ಇದೆ.

ಇದೇ ವೇಳೆ, ಕುಮಾರಸ್ವಾಮಿ ಅವರು ಪತ್ನಿ ಅನಿತಾ ಕುಮಾರಸ್ವಾಮಿ, ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಸೊಸೆ ರೇವತಿ ಅವರೊಂದಿಗೆ ಬಿಡದಿ ಸಮೀಪದ ಕೇತಗಾನಹಳ್ಳಿಯ ಫಾರ್ಮ್‌ಹೌಸ್‌ನಲ್ಲಿ ಮತದಾರರ ಪರಿಷ್ಕರಣೆ ನಮೂನೆಗಳನ್ನು ಭರ್ತಿ ಮಾಡಿದರು. ಪ್ರಕ್ರಿಯೆಯಲ್ಲಿ ಅಕ್ರಮಗಳ ಆರೋಪಕ್ಕೆ ಕಾಂಗ್ರೆಸ್ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ಟೀಕಿಸಿದ ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಎಲ್ಲಿದ್ದಾರೆ ಈ ವಿಷಯದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಯಾಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದರು.

ಬೆಂಗಳೂರಿನ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿರುವ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದ ವಿಡಿಯೊವನ್ನು ಪ್ರದರ್ಶಿಸಿದ ಕುಮಾರಸ್ವಾಮಿ, ಈ ಎಲ್ಲಾ ಬೆಳವಣಿಗೆಗಳ ಹಿಂದೆ ಸ್ಥಳೀಯ ಶಾಸಕ ಎಸ್.ಟಿ. ಸೋಮಶೇಖರ್ ಅವರ ಪಾತ್ರವಿದೆ ಎಂದು ಆರೋಪಿಸಿದರು.



ಉದಯವಾಹಿನಿ ಚಿತ್ರ

> ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು,ಕಾಂಗ್ರೆಸ್ ಸರ್ಕಾರ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಂಡು ಮತದಾರರ ಪಟ್ಟಿಗೆ ಅನರ್ಹರನ್ನು ಸೇರಿಸುವ ಕೆಲಸ ಮಾಡುತ್ತಿದೆ. ಈ ಸಂಬಂಧ ಕರ್ನಾಟಕ ರಾಜ್ಯ ಚುನಾವಣಾ ಆಯೋಗಕ್ಕೂ ದೂರು ಸಲ್ಲಿಸಿದ್ದೇವೆ ಎಂದು ಆರೋಪಿಸಿದರು.-ಹೆಚ್.ಡಿ.ಕುಮಾರಸ್ವಾಮಿ

> ನಾನು ಸೋಮವಾರ ದೆಹಲಿಗೆ ತೆರಳುತ್ತಿದ್ದೇನೆ. ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ರಾಜ್ಯದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಗಮನ ಸೆಳೆಯುತ್ತೇನೆ. ಪ್ರಸ್ತುತ ನಡೆಯುತ್ತಿರುವ ಪರಿಷ್ಕರಣೆ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಿ, ಬಳಿಕ ಹೊಸದಾಗಿ ನಡೆಸುವಂತೆ ಮನವಿ ಮಾಡುತ್ತೇನೆ ಎಂದು ತಿಳಿಸಿದರು.-ಹೆಚ್.ಡಿ.ಕುಮಾರಸ್ವಾಮಿ

### ಜಿಲ್ಲಾಧಿಕಾರಿಗಳ ವಿರುದ್ಧ ಕಠಿಣ ಕ್ರಮ

ಕಾಂಗ್ರೆಸ್ ಸರ್ಕಾರ ಅಧಿಕಾರಿಗಳನ್ನು ತನ್ನ ಸೇವಕರಂತೆ ನಡೆಸಿಕೊಳ್ಳುತ್ತಿದೆ. ಅಧಿಕಾರಿಗಳ ಮೇಲೆ ಒತ್ತಡ ಹೇರಿ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ಪ್ರಕ್ರಿಯೆ ನಡೆಸಲಾಗುತ್ತಿದೆ. ರಾಮನಗರ ಹಾಗೂ ಬೆಂಗಳೂರು ನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಂತರಾಳದಿಂದ...
EDITORIAL

# ವಲಸೆ ಕಾರ್ಮಿಕರ ಬಲಿದಾನ ವ್ಯರ್ಥವಾಗದಿರಲಿ



ಬೆಂಗಳೂರು ದಕ್ಷಿಣ ತಾಲೂಕಿನ ತಾವರೆಕೆರೆಯ ಮಾದಾಪಟ್ಟಣ ಸಮೀಪದಲ್ಲಿನ ಕಲ್ಲು ಕ್ವಾರಿಯಲ್ಲಿ ಬೃಹತ್ ಬಂಡೆಯೊಂದು ಉರುಳಿಬಿದ್ದ ಪರಿಣಾಮವಾಗಿ ಏಳು ಕೂಲಿ ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಗುರುವಾರ ನಡೆದಿದೆ. ಮೃತರಲ್ಲಿ ಓರ್ವ ಯಾದಗಿರಿ ಜಿಲ್ಲೆಯವನಾಗಿದ್ದರೆ ಉಳಿದೆಲ್ಲ ಕಾರ್ಮಿಕರು ಹೊರ ರಾಜ್ಯಕ್ಕೆ ಸೇರಿದವರು. ಬಿಹಾರ, ಛತ್ತೀಸ್‌ಗಡ, ಮಧ್ಯ ಪ್ರದೇಶ ರಾಜ್ಯಗಳಿಂದ ಬಂದ ವಲಸೆ ಕಾರ್ಮಿಕರಿವರು. ಪ್ರಕರಣಕ್ಕೆ ಸಂಬಂಧಿಸಿ ಮೂವರನ್ನು ಬಂಧಿಸಲಾಗಿದ್ದು ಮುಖ್ಯ ಆರೋಪಿ ಬಸವೇಶ್ವರ ಕ್ರಷರ್‌ನ ಮಾಲಕ ತಲೆಮರೆಸಿಕೊಂಡಿದ್ದಾನೆ ಎನ್ನಲಾಗಿದೆ. 'ಕ್ವಾರಿಯಲ್ಲಿ ದುರಂತ ಸಂಭವಿಸುವ ಸಾಧ್ಯತೆಯಿದೆ ಎಂದು ಗೊತ್ತಿದ್ದರೂ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೆ ಕಾರ್ಮಿಕರಿಂದ ಕೆಲಸ ಮಾಡಿಸಲಾಗಿದೆ. ದುರಂತಕ್ಕೆ ನಿರ್ಲಕ್ಷ್ಯವೇ ಕಾರಣ' ಎನ್ನುವುದು ಪ್ರಾಥಮಿಕ ತನಿಖೆಯಿಂದ ಬಹಿರಂಗವಾಗಿದೆ. ಕಲ್ಲು ಕ್ವಾರಿಗಳಲ್ಲಿ ಇಂತಹ ದುರಂತಗಳು ಸರ್ವೇ ಸಾಮಾನ್ಯ ಎಂಬಂತಾಗಿದೆ. ಈ ಹಿಂದೆಯೂ ಇಂತಹ ಹಲವು ಭೀಕರ ದುರಂತಗಳು ಸಂಭವಿಸಿದಾಗ ಸರಕಾರ ಎಚ್ಚೆತ್ತು ಹಲವು ಅಕ್ರಮ ಕಲ್ಲು ಕ್ವಾರಿಗಳನ್ನು ಮುಚ್ಚಿಸಿವೆ. ಆದರೆ ಮುಚ್ಚಿಸುವ ಪ್ರಹಸನ ಕೆಲವು ತಿಂಗಳುಗಳವರೆಗೆ ಮಾತ್ರ ನಡೆಯುತ್ತಿರುತ್ತವೆ. ದುರಂತದ ಗಾಯ ಆರುತ್ತಿದ್ದಂತೆಯೇ ಕ್ವಾರಿಗಳು ಮತ್ತೆ ತೆರೆದುಕೊಳ್ಳುತ್ತವೆ. 2021ರ ಜನವರಿಯಲ್ಲಿ ಶಿವಮೊಗ್ಗದ ಹುಣಸೋಡು ಗ್ರಾಮದ ಕಲ್ಲು ಕ್ವಾರಿ ಬಳಿ ಲಾರಿಯಲ್ಲಿದ್ದ ಸ್ಫೋಟಕಗಳು ಸ್ಫೋಟಿಸಿದ ಪರಿಣಾಮ ಸುಮಾರು 6 ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದರು. ಈ ಸ್ಫೋಟದ ತೀವ್ರತೆಗೆ ಇಡೀ ಶಿವಮೊಗ್ಗ ಜಿಲ್ಲೆಯೇ ಕಂಪಿಸಿತ್ತು. ಚಿಕ್ಕಬಳ್ಳಾಪುರ ಜಿಲ್ಲೆಯ ಹಿರೇನಾಗವಲ್ಲಿ ಗ್ರಾಮದ ಕಲ್ಲು ಕ್ವಾರಿಯಲ್ಲಿ ಅಕ್ರಮವಾಗಿ ಬಚ್ಚಿಟ್ಟಿದ್ದ ಸ್ಫೋಟಕಗಳನ್ನು ವಿಲೇವಾರಿ ಮಾಡುವಾಗಲೂ ಇದೇ ತರಹದ ಸ್ಫೋಟ ಸಂಭವಿಸಿತ್ತು. ಈ ಭೀಕರ ಸ್ಫೋಟದಲ್ಲೂ ಆರು ಜನರು ಮೃತಪಟ್ಟಿದ್ದರು. ವಾರ ನಡೆದ ದುರಂತದಲ್ಲಿ ನಾಲ್ವರ ಸ್ಥಿತಿ ಗಂಭೀರವಿದೆ. ಭವಿಷ್ಯದಲ್ಲಿ ಅವರು ಎಲ್ಲರಂತೆ ಎದ್ದು ಓಡಾಡುವುದು ಕಷ್ಟ ಸಾಧಾರಣವಾಗಿ ಕಲ್ಲು ಕ್ವಾರಿಯಲ್ಲಿ ಪ್ರತೀ ದಿನ ಒಂದಲ್ಲ ಒಂದು ದುರಂತಗಳು ನಡೆಯುತ್ತಲೇ ಇರುತ್ತವೆ. ಸಾವುಗಳು ಸಂಭವಿಸಿದಾಗ ಮಾತ್ರ ಈ ದುರಂತಗಳು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತವೆ.

## ಗಾಯಗೊಂಡ ಕಾರ್ಮಿಕರ ಬಗ್ಗೆ ಯಾರು ಚಿಂತೆ ಮಾಡುತ್ತಾರೆ?


ಒಂದೆರಡು ಸಾವುಗಳನ್ನು ಮಾಧ್ಯಮ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ದಿನಾ ಸಾಯುವವರಿಗೆ ಅಳುವವರು ಯಾರು? ಎನ್ನುವಂತೆ ಸಾರ್ವಜನಿಕರೂ ಆ ದಿಕ್ಕಿಗೆ ತಿರುಗಿ ನೋಡುವುದಿಲ್ಲ.

ಹೀಗಿರುವಾಗ ಗಾಯಗೊಂಡ ಕಾರ್ಮಿಕರ ಬಗ್ಗೆ ಯಾರು ಚಿಂತೆ ಮಾಡುತ್ತಾರೆ? ಇಂತಹ ದುರಂತದಲ್ಲಿ ಮೃತಪಡುವ ಅಥವಾ ಗಾಯಗೊಂಡ ಬಹುತೇಕ ಕಾರ್ಮಿಕರು ವಲಸೆ ಬಂದವರಿರುತ್ತಾರೆ. ಅವರ ಪರವಾಗಿ ಮಾತನಾಡುವವರು, ಅವರಿಗಾಗಿ ಪ್ರತಿಭಟಿಸುವವರು ಯಾರೂ ಇರದ ಕಾರಣ, ಕ್ವಾರಿ ಮಾಲಕರು ಕೊಟ್ಟ ಪರಿಹಾರವನ್ನು ಪಡೆದುಕೊಂಡು ಅವರು ಸುಮ್ಮನಿರಬೇಕಾಗುತ್ತದೆ. ಬಹುತೇಕ ಅಸಂಘಟಿತ ಕಲ್ಲು ಕ್ವಾರಿ ಕಾರ್ಮಿಕರಿಗೆ ಸರಿಯಾದ ವಿಳಾಸಗಳೇ ಇರುವುದಿಲ್ಲ.

ಯಾವುದೇ ಪರಿಹಾರ ಇವರಿಗೆ ದೊರಕುವುದಿಲ್ಲ. ಮೃತಪಟ್ಟ ಆರು ಮಂದಿ ಕಾರ್ಮಿಕರು ವಲಸೆ ಕಾರ್ಮಿಕರಾಗಿರುವುದರಿಂದ ಪರಿಹಾರದ ವಿಷಯದಲ್ಲಿ ಹೆಚ್ಚು ಕಾಳಜಿ ವಹಿಸುವುದಕ್ಕೆ ಆಗುವುದಿಲ್ಲ ಎಂದು ಸರಕಾರ ಹೇಳುತ್ತಿದೆ. ಕಾರ್ಮಿಕರಿಗೆ ನಿಯಮಾನುಸಾರ ಪರಿಹಾರವನ್ನು ನೀಡಲಾಗುವುದು.

ಕಲ್ಲು ಕ್ವಾರಿಯ ಮಾಲಕರೇ ದುರಂತಕ್ಕೆ ಹೊಣೆಯಾಗಿರುವುದರಿಂದ ಅವರ ಮೂಲಕ ಪರಿಹಾರ ಕೊಡಿಸಲಾಗುವುದು ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ. ಸರಕಾರವಾಗಲಿ, ಕಲ್ಲು ಕ್ವಾರಿ ಮಾಲಕರಾಗಲಿ ಸರಿಯಾದ ಪರಿಹಾರವನ್ನು ನೀಡದೇ ಇದ್ದರೆ ಅದಕ್ಕಾಗಿ ನ್ಯಾಯಾಲಯದ ಮೊರೆ ಹೋಗುವ ಯಾವ ಸಾಮರ್ಥ್ಯವೂ ಈ ಕಾರ್ಮಿಕರಿಗೆ ಇಲ್ಲ ಎನ್ನುವುದು ಗೊತ್ತಿರುವ ವಿಷಯವೇ ಆಗಿದೆ. ಬಾಯಿಮಾತಿನಲ್ಲಿ ಪರಿಹಾರ ಘೋಷಿಸಲಾಗುತ್ತದೆಯೇ ಹೊರತು, ಅದು ಎಷ್ಟರಮಟ್ಟಿಗೆ, ಯಾವಾಗ ಕಾರ್ಮಿಕರ ಕುಟುಂಬದ ಕೈ ಸೇರುತ್ತದೆ ಎನ್ನುವ ಭರವಸೆ ಯಾರಿಗೂ ಇಲ್ಲ. ಸಿಕ್ಕಿದಷ್ಟನ್ನು ಪಡೆದುಕೊಂಡು ಅವರು ತಮ್ಮ ಊರು ಸೇರುತ್ತಾರೆ. ತಮ್ಮ ಹಕ್ಕಿಗಾಗಿ ಮತ್ತೆ ಪರವೂರಿಗೆ ಬಂದು ಝುಂಡಾ ಹೂಡುವ ಶಕ್ತಿ ಅವರಿಗಿರುವುದಿಲ್ಲ. ರಾಜ್ಯದ ಕಾರ್ಮಿಕ ಇಲಾಖೆಯ ವಿವಿಧ ಮಂಡಳಿಗಳಲ್ಲಿ 1.72 ಕೋಟಿ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದಾರೆ ಎನ್ನಲಾಗುತ್ತದೆ. ಇವರಲ್ಲಿ 25 ಲಕ್ಷ ಕಟ್ಟಡ ಕಾರ್ಮಿಕರು. ನೋಂದಣಿಗಳಲ್ಲಿ ಅವಕಾಶ ಪಡೆದುಕೊಂಡಿಲ್ಲ. ಕ್ವಾರಿಯಂತಹ ಅಪಾಯಕಾರಿ ಸ್ಥಳಗಳಲ್ಲಿ ದುಡಿಯುವ ವಲಸೆ ಕಾರ್ಮಿಕರ ಬಗ್ಗೆ ಯಾವ ಕಾರ್ಮಿಕ ಇಲಾಖೆಯೂ ತಲೆಕೆಡಿಸಿಕೊಂಡಿಲ್ಲ. ಒಂದು ರೀತಿಯಲ್ಲಿ ಬಳಸಿ ಎಸೆಯಲ್ಪಡುವ ಕಾರ್ಮಿಕರು ಇವರು.

# ನಿಮ್ಮ ದೇಹದಲ್ಲಿ ಪದೇ ಪದೇ ಕಾಣಿಸುವ ನೋವುಗಳು ಕ್ಯಾನ್ಸರ್‌ನ ಚಿಹ್ನೆಗಳೇ? ನಿರ್ಲಕ್ಷಿಸಿದರೆ ಅಪಾಯ- ವೈದ್ಯರ ಎಚ್ಚರಿಕೆ



ನೋವು ಕೇವಲ ಆಯಾಸ ಅಥವಾ ಕಳಪೆ ಭಂಗಿಯಿಂದ ಉಂಟಾಗುತ್ತದೆ ಎಂದು ಭಾವಿಸುವುದು ತಪ್ಪು. ಕೆಲವೊಮ್ಮೆ ದೇಹದಲ್ಲಿನ ಸಣ್ಣ ನೋವುಗಳು ಭವಿಷ್ಯದಲ್ಲಿ ಗಂಭೀರ ಆರೋಗ್ಯ ಬೆದರಿಕೆಯ ಮುಂಚಿನ ಎಚ್ಚರಿಕೆಯ ಚಿಹ್ನೆಗಳಾಗಿ ಗೋಚರವಾಗಬಹುದು. ನಿರಂತರ, ವಿವರಿಸಲಾಗದ ನೋವು ಕ್ಯಾನ್ಸರ್‌ನಂತಹ ಮಾರಣಾಂತಿಕ ಪರಿಸ್ಥಿತಿಗಳನ್ನು ಸೂಚಿಸುತ್ತದೆ ಎಂದು ಆರೋಗ್ಯ ತಜ್ಞರು ಎಚ್ಚರಿಕೆ ನೀಡುತ್ತಾರೆ. ದೇಹದ ವಿವಿಧ ಭಾಗಗಳಲ್ಲಿ ಸಂಭವಿಸುವ ನೋವನ್ನು ಯಾವಾಗಲೂ ನಿರ್ಲಕ್ಷಿಸಬಾರದು ಎಂದು ತಜ್ಞರು ತಿಳಿಸುತ್ತಾರೆ.ದೇಹದ ವಿವಿಧ ಭಾಗಗಳಲ್ಲಿ ನೋವು ಯಾವಾಗಲೂ ಮಾನಸಿಕ ಒತ್ತಡ ಅಥವಾ ಕಳಪೆ ಕುಳಿತುಕೊಳ್ಳುವ ಭಂಗಿಯಿಂದ ಉಂಟಾಗುವುದಿಲ್ಲ. ಇದು ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳ ಲಕ್ಷಣವೂ ಆಗಿರಬಹುದು. ಅಂತಹ ನೋವು ತೂಕ ನಷ್ಟ, ಆಯಾಸ ಅಥವಾ ಹಸಿವಿನ ನಷ್ಟದಂತಹ ಆತಂಕಕಾರಿ ಚಿಹ್ನೆಗಳೊಂದಿಗೆ ಇದ್ದರೆ, ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕಾಗುತ್ತದೆ. ಈ ದೈಹಿಕ ಸಂಕೇತಗಳು ತೀವ್ರವಾದ ಆಧಾರವಾಗಿರುವ ಸಮಸ್ಯೆ ಸೂಚಿಸಬಹುದು.ಬೆನ್ನು ನೋವು ಅನೇಕರು ತಮ್ಮ ದೈನಂದಿನ ಜೀವನದಲ್ಲಿ ಎದುರಿಸುತ್ತಿರುವ ಸಾಮಾನ್ಯ ಆರೋಗ್ಯ ಸಮಸ್ಯೆಯಾಗಿದೆ. ಸುಮಾರು ಶೇ.80ರಷ್ಟು ಜನರು ಲ್ಯಾಪ್‌ಟಾಪ್‌ಗಳಲ್ಲಿ ಕೆಲಸ ಮಾಡುವುದರಿಂದ ಅಥವಾ ತಪ್ಪಾಗಿ ಕುಳಿತುಕೊಳ್ಳುವುದರಿಂದ ಇದನ್ನು ಅನುಭವಿಸುತ್ತಾರೆ. ನೋವು ತೀವ್ರವಾಗಿದ್ದರೆ ಮತ್ತು ನಿರಂತರವಾಗಿದ್ದರೆ ವಿಶ್ರಾಂತಿ ಅಥವಾ ಔಷಧಿಗಳ ಹೊರತಾಗಿಯೂ ಕಡಿಮೆಯಾಗದಿದ್ದರೆ, ಅದು ಹೆಚ್ಚು ಗಂಭೀರವಾದದ್ದನ್ನು ಸೂಚಿಸುತ್ತದೆ. ಬಹಳ ಅಪರೂಪದ ಸಂದರ್ಭಗಳಲ್ಲಿ ಬೆನ್ನು ನೋವು ಮೇದೋಜ್ಜೀರಕ ಗ್ರಂಥಿ, ಸ್ತನ, ಶ್ವಾಸಕೋಶ, ಪ್ರಾಸ್ಟೇಟ್ ಇಲ್ಲವೇ ಮೂತ್ರಪಿಂಡದ ಕ್ಯಾನ್ಸರ್‌ನ ಲಕ್ಷಣವಾಗಿರಬಹುದು ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ. ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ಪ್ರಕರಣಗಳಲ್ಲಿ ಹೊಟ್ಟೆ ಅಥವಾ ಬೆನ್ನು ನೋವು ಸಾಮಾನ್ಯವಾಗಿದೆ ಎಂದು ಅಮೇರಿಕನ್ ಕ್ಯಾನ್ಸರ್ ಸೊಸೈಟಿ ಗಮನಿಸುತ್ತದೆ.ಅತಿಯಾದ ಚಹಾ ಅಥವಾ ಕಾಫಿ ಸೇವನೆ ಅಥವಾ ಜಂಕ್ ಫುಡ್ ತಿನ್ನುವಂತಹ ಸಾಮಾನ್ಯ ಅಭ್ಯಾಸಗಳಿಂದ ಅನಿಲ, ಉಬ್ಬುವುದು ಹಾಗೂ ಸೆಳೆತದಂತಹ ಸಮಸ್ಯೆಗಳು ಉದ್ಭವಿಸಬಹುದು. ಅಂಡಾಶಯ, ಕೊಲೊನ್ ಹಾಗೂ ಯಕೃತ್ತಿನ ಕ್ಯಾನ್ಸರ್‌ಗಳಂತಹ ಪರಿಸ್ಥಿತಿಗಳು ದೀರ್ಘಕಾಲದ ಹೊಟ್ಟೆ ಅಥವಾ ಶ್ರೋಣಿ ಕುಹರದ ನೋವನ್ನು ಉಂಟುಮಾಡಬಹುದು. ಕಾಲಾನಂತರದಲ್ಲಿ ಮುಂದುವರಿಯುವ ಅಥವಾ ಹದಗೆಡುವ ಹೊಟ್ಟೆಯ ಸಮಸ್ಯೆಗಳನ್ನು ನಿರ್ಲಕ್ಷಿಸಬಾರದು ಎಂದು ತಜ್ಞರು ಸಲಹೆ ನೀಡುತ್ತಾರೆ. ಪ್ರತಿಯೊಬ್ಬರೂ ಒಂದು ಹಂತದಲ್ಲಿ ತಲೆನೋವನ್ನು ಅನುಭವಿಸುತ್ತಾರೆ. ಪ್ರಮಾಣಿತ ಔಷಧಿಗಳಿಗೆ ಪ್ರತಿಕ್ರಿಯಿಸದ ದೀರ್ಘಕಾಲದ ತಲೆನೋವು ಎಚ್ಚರಿಕೆಯ ಸಂಕೇತವಾಗಿರಬಹುದು. ಮೆದುಳಿನ ಗೆಡ್ಡೆಗಳು ಒತ್ತಡದಂತಹ ತಲೆನೋವಿಗೆ ಕಾರಣವಾಗಬಹುದು ಎಂದು ತಜ್ಞರು ಎಚ್ಚರಿಸುತ್ತಾರೆ. ಈ ತಲೆನೋವು ಬೆಳಿಗ್ಗೆ ಇಲ್ಲವೇ ಮಲಗಿರುವಾಗ ತೀವ್ರಗೊಳ್ಳಬಹುದು. ಮೆದುಳಿನ ಗೆಡ್ಡೆ ಇರುವ ವ್ಯಕ್ತಿಗಳಲ್ಲಿ ಬೆಳಗಿನ ತಲೆನೋವು ಸಾಮಾನ್ಯ ಎಂದು ಮೇಯೊ ಕ್ಲಿನಿಕ್ ಗಮನಿಸುತ್ತದೆ.ನಿಮ್ಮ ಕಾಲು ಅಥವಾ ಭುಜದಲ್ಲಿ ನೋವು ಇದೆಯೇ? ಅನೇಕ ಜನರು ಇದನ್ನು ದೂರದ ನಡಿಗೆ ಅಥವಾ ಸ್ನಾಯು ಸೆಳೆತದಿಂದ ಉಂಟಾಗುವಂತೆ ತಪ್ಪಾಗಿ ಹೇಳುತ್ತಾರೆ. ನೋವು ಮುಂದುವರಿದರೆ ವಿಶೇಷವಾಗಿ ವಿಶ್ರಾಂತಿ ಪಡೆಯುವಾಗ ಇದು ಗಂಭೀರವಾದ ಆಧಾರವಾಗಿರುವ ಸಮಸ್ಯೆಯನ್ನು ಸೂಚಿಸುತ್ತದೆ. ರಾತ್ರಿಯಲ್ಲಿ ತೀವ್ರಗೊಳ್ಳುವ ಮೂಳೆ ನೋವು, ನಿರ್ದಿಷ್ಟವಾಗಿ ಆಸ್ಟಿಯೋಸಾರ್ಕೊಮಾ ಅಥವಾ ಮೆಟಾಸ್ಟಾಟಿಕ್ ಕ್ಯಾನ್ಸರ್‌ನ ಸಂಕೇತವಾಗಿರಬಹುದು. ಇದರ ಪರಿಣಾಮವಾಗಿ ಸಾಕಷ್ಟು ವಿಶ್ರಾಂತಿಯ ನಂತರ ನೋವು ಕಡಿಮೆಯಾಗದಿದ್ದರೆ ಅಥವಾ ಔಷಧಿಗಳಿಗೆ ಪ್ರತಿಕ್ರಿಯಿಸಲು ವಿಫಲವಾದರೆ ಅವರು ವೈದ್ಯರನ್ನು ಸಂಪರ್ಕಿಸಬೇಕು.



ವಿದ್ಯಾರ್ಥಿ ವಿಜಯ

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

14

ವಿಜ್ಞಾನವೂ ಇದನ್ನೇ ಸಾರುತ್ತದೆ.
ನಿಯಮಿತ ವೇಳಾಪಟ್ಟಿ ದೇಹದ ಜೈವಿಕ ಗಡಿಯಾರವನ್ನು ಶ್ರುತಿಗೊಳಿಸಿ, ಮೆದುಳಿನ ಕೋಶಕೋಶವನ್ನೂ ಚುರುಕಾಗಿಸುತ್ತದೆ. ಗಮನ ಕೇಂದ್ರೀಕೃತಗೊಳ್ಳುತ್ತದೆ, ಸ್ಮರಣೆ ಸ್ಫಟಿಕವಾಗುತ್ತದೆ.
ಸಮಯವನ್ನು ಗೌರವಿಸಿದವನಿಗೆ ಮೆದುಳು ವರವನ್ನು ನೀಡುತ್ತದೆ.

# ಸಮಯದ ಸೂತ್ರ: ಯಶಸ್ಸಿನ ಮಂತ್ರ

ವಿದ್ಯಾರ್ಥಿ ಜೀವನವೆಂಬ ಹರಿವ ನದಿಗೆ ಸಮಯವೇ ದಂಡೆ. ಶಿಸ್ತು ಮತ್ತು ಸಮಯಪ್ರಜ್ಞೆ ಎಂಬ ಎರಡು ದಡಗಳ ನಡುವೆ ಹರಿದಾಗ ಮಾತ್ರ ಗುರಿ ಎಂಬ ಸಾಗರ ಸೇರಲು ಸಾಧ್ಯ. ಸಮಯದ ಸರಿಯಾದ ಲೆಕ್ಕಾಚಾರವೇ ಈ ಪಯಣದ ದಿಕ್ಸೂಚಿ. ಅದನ್ನು ಅರಿತವನು ಮಾತ್ರ ಆಲಸ್ಯದ ಸುಳಿಗೆ ಸಿಲುಕದೆ, ಸಾಧನೆಯ ಶಿಖರವೇರಬಲ್ಲ.

ಮುಂಜಾವಿನ ಮೌನದಲ್ಲಿ ಪಾಠದ ಗಂಧ, ಮಧ್ಯಾಹ್ನದ ಬಿಸಿಲಲ್ಲಿ ಪುನರಾವರ್ತನೆಯ ಬೆವರು, ಸಂಜೆಯ ತಂಪಿನಲ್ಲಿ ಅಭ್ಯಾಸದ ಆನಂದ, ಇರುಳಿನ ಮಡಿಲಲ್ಲಿ ವಿಶ್ರಾಂತಿಯ ನೆಮ್ಮದಿ ಹೀಗೆ ದಿನವನ್ನು ಹಂಚಿಕೊಂಡವನ ಬದುಕು ಹಸನಾಗುತ್ತದೆ. ಮುಖ್ಯ ಕೆಲಸ ಮೊದಲು ಎಂಬ ಮಂತ್ರವನ್ನು ಜಪಿಸಿದರೆ ಒತ್ತಡವೆಂಬ ನೆರಳು ಹತ್ತಿರ ಸುಳಿಯದು. ಗಡಿಯಾರದ ಮುಳ್ಳುಗಳ ಜೊತೆ ಹೆಜ್ಜೆ ಹಾಕಿದಾಗ ಬದುಕೇ ಸಂಗೀತವಾಗುತ್ತದೆ.ಸಮಯದ ಲೆಕ್ಕ ತಿಳಿದ ವಿದ್ಯಾರ್ಥಿಯಲ್ಲಿ ಶಿಸ್ತು ಸ್ವಭಾವವಾಗುತ್ತದೆ, ಆತ್ಮವಿಶ್ವಾಸ ಅರಳುತ್ತದೆ, ಜವಾಬ್ದಾರಿ ಜಾಗೃತವಾಗುತ್ತದೆ. ಪೋಷಕರಿಗೆ ಹೆಮ್ಮೆ, ಶಿಕ್ಷಕರಿಗೆ ತೃಪ್ತಿ, ಸಮಾಜಕ್ಕೆ ಆಸ್ತಿ ಅವನೇ ಆಗುತ್ತಾನೆ. ಆದ್ದರಿಂದಲೇ, ಸಮಯದ ಲೆಕ್ಕಾಚಾರ ಯಶಸ್ಸಿನ ಬೀಗದ ಕೈ. ಅದನ್ನು ಕರಗತ ಮಾಡಿಕೊಂಡವನಿಗೆ ಸೋಲೆಂಬ ಪದವೇ ಅಪರಿಚಿತ.



# ಕನ್ನಡದ ಕಣ್ಮಣಿಗಳು: ತ್ಯಾಗ, ಸರಳತೆ ಮತ್ತು ಸೇವೆಯ ಅಮರ ಪಥ



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು



ಕನ್ನಡ ಭಾಷೆಯ ಬೆಳವಣಿಗೆಗೆ ಕೇವಲ ಸಾಹಿತ್ಯ ಕೃತಿಗಳಷ್ಟೇ ಅಲ್ಲ, ಅದಕ್ಕಾಗಿ ಬದುಕನ್ನೇ ಸಮರ್ಪಿಸಿದ ಮಹನೀಯರ ತ್ಯಾಗ ಮತ್ತು ಸೇವೆಯೂ ಕಾರಣವಾಗಿದೆ. ಅವರ ಜೀವನ ಕನ್ನಡಿಗರಿಗೆ ಸದಾ ಆದರ್ಶವಾಗಿದೆ.

ಗಳಗನಾಥರು ತಲೆಯ ಮೇಲೆ ಕನ್ನಡ ಪುಸ್ತಕಗಳನ್ನು ಹೊತ್ತು ಮನೆಮನೆಗೆ ತೆರಳಿ ಓದುವ ಸಂಸ್ಕೃತಿಯನ್ನು ಬೆಳೆಸಿದರು. ನಿಮ್ಮ ಮನೆಯಲ್ಲಿ ಲಕ್ಷ್ಮಿಯಿದ್ದರೆ ಸಾಲದು, ಸರಸ್ವತಿಯೂ ನೆಲೆಸಬೇಕು ಎಂಬ ಅವರ ಮಾತು ಕನ್ನಡದ ಮೇಲಿನ ಪ್ರೀತಿಯನ್ನು ಸಾರುತ್ತದೆ. ವಿ. ಸೀತಾರಾಮಯ್ಯ ಅವರು ಪ್ರತಿದಿನ ತಮ್ಮ ಆಹಾರದ ಒಂದು ಭಾಗವನ್ನು ಹಕ್ಕಿ-ಪ್ರಾಣಿಗಳಿಗೆ ನೀಡುವ ಮೂಲಕ ಕರುಣೆ ಮತ್ತು ಸಹಬಾಳ್ವೆಯ ಸಂದೇಶ ಸಾರಿದರು. ಕವಿ ದ.ರಾ. ಬೇಂದ್ರೆಯವರು ಚಪ್ಪಲಿ ಹೊಲಿಯುತ್ತಿದ್ದ ವ್ಯಕ್ತಿಗೆ ಛತ್ರಿ ಹಿಡಿದು ಸಮಾನತೆ ಮತ್ತು ಶ್ರಮಕ್ಕೆ ಗೌರವ ಸಲ್ಲಿಸಿದರು.

ಡಿ.ವಿ. ಗುಂಡಪ್ಪ ಅವರ ಸರಳ ಜೀವನ ಐಶ್ವರ್ಯಕ್ಕಿಂತ ಮೌಲ್ಯಗಳೇ ಶ್ರೇಷ್ಠವೆಂಬುದನ್ನು ತೋರಿಸಿತು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜಿಲ್ಲಾಧಿಕಾರಿಯಾಗಿದ್ದಾಗ ಸಾರ್ವಜನಿಕ ಬಾವಿಯ ಮೊದಲ ಕೊಡ ನೀರನ್ನು ಪ್ರಾಣಿ-ಪಕ್ಷಿಗಳಿಗೆ ಮೀಸಲಿಡುವಂತೆ ಸೂಚಿಸಿ ಮಾನವೀಯ ಆಡಳಿತಕ್ಕೆ ಮಾದರಿಯಾದರು. ಸಾಹಿತಿ ದೇವುಡು ಅವರು ಅನಾರೋಗ್ಯದಿಂದ ಕಾಲು ಕಳೆದುಕೊಂಡರೂ ಕನ್ನಡ ಸೇವೆಯ ಉತ್ಸಾಹವನ್ನು ಕಳೆದುಕೊಳ್ಳಲಿಲ್ಲ. ಕನ್ನಡಕ್ಕಾಗಿ ಕೆಲಸ ಮಾಡುವ ನನ್ನ ಕೈಗಳನ್ನು ಯಾರೂ ಕಸಿದುಕೊಳ್ಳಲಾರರು ಎಂಬ ಅವರ ಮಾತು ಅಚಲ ಸಂಕಲ್ಪದ ಸಂಕೇತವಾಗಿದೆ.

ಟಿ. ಎಸ್. ವೆಂಕಣ್ಣಯ್ಯ ಅವರು ವೈಯಕ್ತಿಕ ದುಃಖವನ್ನೂ ಮೀರಿ ಸಾಹಿತ್ಯ ಕಾರ್ಯಕ್ರಮವನ್ನು ಪೂರ್ಣಗೊಳಿಸುವ ಮೂಲಕ ಕನ್ನಡ ಸೇವೆಯ ಮೇಲಿನ ನಿಷ್ಠೆಯನ್ನು ತೋರಿಸಿದರು. ಈ ಮಹನೀಯರು ನಮಗೆ ಬಿಟ್ಟುಹೋದದ್ದು ಕೇವಲ ಸಾಹಿತ್ಯವಲ್ಲ ಮಾನವೀಯತೆ, ತ್ಯಾಗ, ಸೇವಾಭಾವ, ಸಮಾನತೆ ಮತ್ತು ಕನ್ನಡದ ಮೇಲಿನ ಅಪಾರ ಪ್ರೀತಿಯ ಮೌಲ್ಯಗಳಾಗಿವೆ.

> ಜೀವನ ಕನ್ನಡಿಗರಿಗೆ ಸದಾ ಆದರ್ಶ

ಇಂದಿನ ತಂತ್ರಜ್ಞಾನದ ಯುಗದಲ್ಲಿ ಯುವಜನತೆಗೆ ಅವರ ಆದರ್ಶಗಳನ್ನು ಪರಿಚಯಿಸುವುದು ಅತ್ಯಗತ್ಯವಾಗಿದೆ. ಭಾಷೆಯನ್ನು ಉಳಿಸುವ ಹೊಣೆಗಾರಿಕೆ ಸರ್ಕಾರದಷ್ಟೇ ಪ್ರತಿಯೊಬ್ಬ ಕನ್ನಡಿಗನದ್ದಾಗಿದೆ.

ಮನೆಯಲ್ಲಿ ಪುಸ್ತಕಗಳಿಗೆ ಸ್ಥಾನ, ಮನಸ್ಸಿನಲ್ಲಿ ಕನ್ನಡದ ಮೇಲಿನ ಅಭಿಮಾನ ಮತ್ತು ಬದುಕಿನಲ್ಲಿ ಮಾನವೀಯತೆ ಬೆಳೆದಾಗ ಮಾತ್ರ ಈ ಮಹನೀಯರ ಕನಸು ನನಸಾಗುತ್ತದೆ. ಅವರ ಆದರ್ಶಗಳು ನಮ್ಮ ಬದುಕಿಗೆ ದಾರಿದೀಪವಾಗಲಿ. ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ!

# ಶುಂಠಿ ಚಹಾ ಹೆಚ್ಚು ಕುಡಿಯುತ್ತೀರಾ? ಮಿತಿಮೀರಿದರೆ ಈ ಆರೋಗ್ಯ ಸಮಸ್ಯೆ ಕಾಡಬಹುದು!

ಬೆಳಗಿನ ಆರಂಭವನ್ನು ಬಿಸಿ ಬಿಸಿ ಶುಂಠಿ ಚಹಾದೊಂದಿಗೆ ಮಾಡುವವರು ಅನೇಕರಿದ್ದಾರೆ. ಸೀಸನಲ್ ಜ್ವರ ಶೀತ, ಕೆಮ್ಮು ಅಥವಾ ಗಂಟಲು ನೋವಿನ ಸಂದರ್ಭದಲ್ಲಿ ಶುಂಠಿ ಚಹಾವನ್ನು ಮನೆ ಮದ್ದಿನಂತೆ ಸೇವಿಸುವ ಪದ್ಧತಿಯೂ ಇದೆ. ಶುಂಠಿಯು ಹಲವು ಔಷಧೀಯ ಗುಣಗಳನ್ನು ಹೊಂದಿದ್ದರೂ, ಅದನ್ನು ಅತಿಯಾಗಿ ಸೇವಿಸುವುದು ಎಲ್ಲರಿಗೂ ಸುರಕ್ಷಿತವಲ್ಲ ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ.ಆರೋಗ್ಯ ತಜ್ಞರ ಪ್ರಕಾರ, ಸಾಮಾನ್ಯವಾಗಿ ಒಬ್ಬ ವಯಸ್ಕ ವ್ಯಕ್ತಿಯು ದಿನಕ್ಕೆ 4 ಗ್ರಾಂಗಿಂತ ಹೆಚ್ಚು ಶುಂಠಿ ಸೇವಿಸದಿರುವುದು ಉತ್ತಮ. ಕೇವಲ ಶುಂಠಿ ಚಹಾದಿಂದ ಈ ಪ್ರಮಾಣವನ್ನು ಮೀರುವುದು ಅಪರೂಪವಾದರೂ, ಆಹಾರ, ಕಷಾಯ, ಹರ್ಬಲ್ ಪಾನೀಯಗಳು ಹಾಗೂ ಮನೆಮದ್ದುಗಳ ಮೂಲಕವೂ ಶುಂಠಿ ಸೇವಿಸಿದರೆ ಒಟ್ಟು ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

ಶುಂಠಿಯನ್ನು ಮಿತಿಮೀರಿ ಸೇವಿಸಿದರೆ ಕೆಲವರಿಗೆ ಎದೆಯುರಿ, ಆಸಿಡಿಟಿ, ಹೊಟ್ಟೆಯಲ್ಲಿ ಉರಿ, ಹೊಟ್ಟೆ ಉಬ್ಬರ, ಅತಿಸಾರ ಅಥವಾ ಜೀರ್ಣಕ್ರಿಯೆಯಲ್ಲಿ ಅಸ್ವಸ್ಥತೆ ಕಾಣಿಸಬಹುದು. ಸಾಮಾನ್ಯವಾಗಿ ಇವು ಶುಂಠಿಯ ಖಾರದ ಸ್ವಭಾವದಿಂದ ಉಂಟಾಗುವ ತಾತ್ಕಾಲಿಕ ಸಮಸ್ಯೆಗಳಾಗಿರುತ್ತವೆ. ಆದರೆ, ಶುಂಠಿ ಸೇವಿಸಿದ ಬಳಿಕ ಚರ್ಮದ ಮೇಲೆ ದದ್ದು, ತುರಿಕೆ, ತುಟಿ ಅಥವಾ ಮುಖದಲ್ಲಿ ಊತ, ಉಸಿರಾಟದ ತೊಂದರೆ ಅಥವಾ ತೀವ್ರ ಹೊಟ್ಟೆನೋವು ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು. ಇವು ಅಲರ್ಜಿ ಅಥವಾ ಇತರೆ ಆರೋಗ್ಯ ಸಮಸ್ಯೆಯ ಲಕ್ಷಣಗಳಾಗಿರಬಹುದು.

ಪಿತ್ತಕೋಶದ ಸಮಸ್ಯೆ ಇರುವವರು ಶುಂಠಿ ಚಹಾವನ್ನು ನಿಯಮಿತವಾಗಿ ಸೇವಿಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಉತ್ತಮ. ಶುಂಠಿಯು ರಕ್ತದೊತ್ತಡವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವ ಗುಣ ಹೊಂದಿರುವುದರಿಂದ ಕಡಿಮೆ ರಕ್ತದೊತ್ತಡ ಇರುವವರು ಅಥವಾ ರಕ್ತದೊತ್ತಡದ ಔಷಧಿ ಸೇವಿಸುವವರು ಮಿತವಾಗಿ ಸೇವಿಸಬೇಕು. ಇದರ ಜತೆಗೆ, ಶುಂಠಿಯು ರಕ್ತವನ್ನು ತೆಳುವಾಗಿಸುವ ಸ್ವಾಭಾವಿಕ ಗುಣವನ್ನು ಹೊಂದಿರುವುದರಿಂದ ರಕ್ತಸ್ರಾವದ ಸಮಸ್ಯೆ ಇರುವವರು ಅಥವಾ ರಕ್ತ ತೆಳುವಾಗಿಸುವ ಔಷಧಿಗಳನ್ನು ಸೇವಿಸುತ್ತಿರುವವರು ವೈದ್ಯರ ಸಲಹೆಯಿಲ್ಲದೆ ಹೆಚ್ಚು ಪ್ರಮಾಣದಲ್ಲಿ ಶುಂಠಿ ಸೇವಿಸುವುದನ್ನು ತಪ್ಪಿಸಬೇಕು. ಗರ್ಭಿಣಿಯರು ಕೂಡ ನಿಯಮಿತವಾಗಿ ಹೆಚ್ಚಿನ ಪ್ರಮಾಣದಲ್ಲಿ ಶುಂಠಿ ಸೇವಿಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಒಳಿತು. ಮಿತವಾಗಿ ಸೇವಿಸಿದರೆ ಶುಂಠಿ ಚಹಾ ಆರೋಗ್ಯಕ್ಕೆ ಹಲವು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ. ಇದು ವಾಕರಿಕೆ, ವಾಂತಿ, ಅಜೀರ್ಣ, ಹೊಟ್ಟೆ ಉಬ್ಬರ ಮತ್ತು ಗ್ಯಾಸ್ಟ್ರಿಕ್ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ. ಕೆಲವು ಅಧ್ಯಯನಗಳ ಪ್ರಕಾರ ಶಸ್ತ್ರಚಿಕಿತ್ಸೆ ಅಥವಾ ಕೀಮೋಥೆರಪಿ ಬಳಿಕ ಉಂಟಾಗುವ ವಾಕರಿಕೆಯನ್ನು ನಿಯಂತ್ರಿಸಲು ಕೂಡ ಶುಂಠಿ ನೆರವಾಗಬಹುದು.

ಶುಂಠಿಯಲ್ಲಿರುವ ಜಿಂಜೆರಾಲ್‌ಎಂಬ ನೈಸರ್ಗಿಕ ಸಂಯುಕ್ತವು ಉರಿಯೂತ ನಿವಾರಕ ಮತ್ತು ಆಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದ್ದು, ದೇಹದ ಉರಿಯೂತವನ್ನು ಕಡಿಮೆ ಮಾಡಲು ಹಾಗೂ ರೋಗನಿರೋಧಕ ಶಕ್ತಿಯನ್ನು ಬೆಂಬಲಿಸಲು ಸಹಾಯ ಮಾಡುತ್ತದೆ. ಶೀತ, ಕೆಮ್ಮು ಮತ್ತು ಗಂಟಲು ನೋವಿನ ಸಮಯದಲ್ಲೂ ಶುಂಠಿ ಚಹಾ ತಾತ್ಕಾಲಿಕ ನೆಮ್ಮದಿ ನೀಡಬಹುದು.ಶುಂಠಿ ಆರೋಗ್ಯಪೂರ್ಣ ಆಹಾರ ಪದಾರ್ಥವಾಗಿದ್ದರೂ, ಹೆಚ್ಚಾದರೆ ಅಮೃತವೂ ವಿಷ ಎಂಬ ಮಾತಿನಂತೆ ಮಿತಿಯಲ್ಲಿ ಸೇವಿಸುವುದು ಮುಖ್ಯ. ಆರೋಗ್ಯ ಸಮಸ್ಯೆ ಹೊಂದಿರುವವರು ಅಥವಾ ನಿಯಮಿತವಾಗಿ ಔಷಧಿ ಸೇವಿಸುತ್ತಿರುವವರು ಶುಂಠಿ ಸೇವನೆಯನ್ನು ಹೆಚ್ಚಿಸುವ ಮೊದಲು ವೈದ್ಯರ ಸಲಹೆ ಪಡೆಯುವುದು ಉತ್ತಮ. ಸಮತೋಲಿತ ಆಹಾರ ಮತ್ತು ಆರೋಗ್ಯಕರ ಜೀವನಶೈಲಿಯ ಭಾಗವಾಗಿ ಮಿತ ಪ್ರಮಾಣದಲ್ಲಿ ಶುಂಠಿ ಚಹಾ ಸೇವಿಸಿದರೆ ಅದರ ಲಾಭಗಳನ್ನು ಸುರಕ್ಷಿತವಾಗಿ ಪಡೆಯಬಹುದು.



# ದಿನನಿತ್ಯದ ಆಹಾರದಲ್ಲಿ ಪೇರಲ ಹಣ್ಣಿನ ಸೇವನೆ ಏಕಿರಬೇಕು?

ನಮ್ಮ ದಿನ ನಿತ್ಯದ ಆಹಾರ ಕ್ರಮದಲ್ಲಿ ಹಣ್ಣುಗಳ ಸೇವನೆ ಬಹಳಷ್ಟು ಅಗತ್ಯವಾಗಿ ಇರುತ್ತದೆ. ಅದರಲ್ಲೂ ಸಾಮಾನ್ಯವಾಗಿ ನಾವು ಪೇರಳೆ ಹಣ್ಣನ್ನು ಹೆಚ್ಚು ಹೇರಳವಾಗಿ ನಮ್ಮ ಸುತ್ತಮುತ್ತಲೇ ಸಿಗುವ ಕಾರಣ ನಿರ್ಲಕ್ಷ್ಯ ಮಾಡುತ್ತೇವೆ. ಆದರೆ ಇವುಗಳ ಆರೋಗ್ಯ ಲಾಭ ತಿಳಿದರೆ ಖಂಡಿತ ದಿನಕ್ಕೊಂದು ಆದರೂ ಸೇವನೆಗೆ ಆಸಕ್ತಿ ವಹಿಸುತ್ತೀರಾ. ರೋಗನಿರೋಧಕ ಶಕ್ತಿಯನ್ನು ಬಲಪಡಿಸುವುದರಿಂದ ಹಿಡಿದು ಜೀರ್ಣಕ್ರಿಯೆ ಸುಧಾರಿಸುವ ವರೆಗೆ ಅನೇಕ ಲಾಭಗಳನ್ನು ನೀಡುತ್ತವೆ.

ಸೀಬೆ ಹಣ್ಣು ಅಥವಾ ಪೇರಳೆ ಹಣ್ಣು ಕಡಿಮೆ ಕ್ಯಾಲೊರಿ ಹಾಗೂ ಅತಿ ಹೆಚ್ಚು ಪೋಷಕಾಂಶಗಳನ್ನು ಹೊಂದಿರುವ ಹಣ್ಣು ಇದಾಗಿದೆ. ಒಂದು ಹಣ್ಣು ನಿಮ್ಮ ದೈನಂದಿನ ಫೈಬರ್ ಅಗತ್ಯಗಳಲ್ಲಿ ಸುಮಾರು 12% ಅನ್ನು ಒದಗಿಸುತ್ತದೆ. ಇದು ಕ್ಯಾಲೊರಿಗಳನ್ನು ನಿಯಂತ್ರಣದಲ್ಲಿಡುವಾಗ ಹೆಚ್ಚು ಕಾಲ ಹೊಟ್ಟೆ ತುಂಬಿದ ಅನುಭವವನ್ನು ನೀಡುತ್ತದೆ.. ಹಾಗಾಗಿ ತೂಕ ಇಳಿಸಬೇಕು ಎಂದು ಇದ್ದವರು ಈ ಹಣ್ಣಿನ ಸೇವನೆಗೆ ಆಧ್ಯತೆ ನೀಡಿ.

ಪೇರಲೆಯ ತಿರುಳು ಮತ್ತು ಸಿಪ್ಪೆ ಎರಡೂ ಪಾಲಿಫಿನಾಲ್‌ಗಳಲ್ಲಿ ಸಮೃದ್ಧವಾಗಿವೆ. ಇದು ಶಕ್ತಿಯುತವಾದ ಉತ್ಕರ್ಷಣ ನಿರೋಧಕ ಶಕ್ತಿಯನ್ನು ಒದಗಿಸುತ್ತದೆ. ಪೇರಲವು ನೈಸರ್ಗಿಕ ಸಂಯುಕ್ತ ಗಳಿಂದ ತುಂಬಿದ್ದು, ಅದು ದೇಹವನ್ನು ಜೀವಕೋಶದ ಹಾನಿಯಿಂದ ತಪ್ಪಿಸಿ ರೋಗನಿರೋಧಕ ವ್ಯವಸ್ಥೆಯನ್ನು ಬೆಂಬಲಿಸಲು ಸಹಾಯ ಮಾಡುತ್ತದೆ. ಹೀಗಾಗಿ ಯಾವುದೇ ಖಾಯಿಲೆಗಳು ಹರಡದಂತೆ ತಡೆಯಬಹುದಾಗಿದೆ. ಜೀರ್ಣಕ್ರಿಯೆಗೆ ರಾಮಬಾಣ ಪೇರಳೆ ಹಣ್ಣು ಆಗಿದೆ. ನಾರಿನಂಶದ ಪ್ರಮಾಣ ಇದರಲ್ಲಿ ಸಮೃದ್ಧವಾಗಿದೆ. ಇದು ಮಲಬದ್ಧತೆಯ ಸಮಸ್ಯೆಗಳನ್ನು ಕಡಿಮೆಮಾಡಿ ಕರುಳಿನ ಆರೋಗ್ಯವನ್ನು ರಕ್ಷಣೆ ಮಾಡುತ್ತದೆ.ವೈದ್ಯಕೀಯ ಅಧ್ಯಯನವೊಂದು ನಡೆದ ಸಂಶೋಧನೆಯ ಪ್ರಕಾರ ಸೀಬೆ ಹಣ್ಣನ್ನು ಸೇವನೆ ಮಾಡಿದವರಲ್ಲಿ ರಕ್ತದ ಸಕ್ಕರೆ ಮಟ್ಟ ಕಡಿಮೆಯಾಗಿದೆ. ಇದು ದೇಹದಲ್ಲಿ ಸಕ್ಕರೆಯ ಹೀರಿ ಕೊಳ್ಳುವಿಕೆಯನ್ನು ನಿಧಾನಮಾಡಿ ಮಧುಮೇಹವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ?ಸೀಬೆಹಣ್ಣಿನಲ್ಲಿರುವ ಪೊಟ್ಯಾಶಿಯಂ ಮತ್ತು ನಾರಿನಂಶ ಹೃದಯದ ರಕ್ಷಣೆಗೆ ಬಹಳಷ್ಟು ಒಳಿತು. ಉತ್ಕರ್ಷಣ ನಿರೋಧಕಗಳು ಮತ್ತು ವಿಟಮಿನ್‌ಗಳ ಸಮೃದ್ಧ ಪೂರೈಕೆಯು ಹೃದಯವನ್ನು ಸ್ವತಂತ್ರ ರಾಡಿಕಲ್ ಹಾನಿಯಿಂದ ರಕ್ಷಿಸಲು ಸಹಾಯಕವಾಗುತ್ತದೆ. ಹಣ್ಣಾದ ಸೀಬೆಹಣ್ಣನ್ನು ತಿನ್ನುವುದರಿಂದ ಹೃದಯದ ಆರೋಗ್ಯ ರಕ್ಷಣೆ ಮಾಡಬಹುದು. ಪೇರಳೆಯಲ್ಲಿರುವ ವಿಟಮಿನ್‌ಗಳು ಮತ್ತು ಆಂಟಿ ಆಕ್ಸಿಡೆಂಟ್‌ಗಳು ನಿಮ್ಮ ಚರ್ಮಕ್ಕೆ ಬಹಳಷ್ಟು ಉಪಯೋಗಕಾರಿಯಾಗಿದೆ. ಈ ಉತ್ಕರ್ಷಣ ನಿರೋಧಕಗಳು ಚರ್ಮವನ್ನು ಹಾನಿಯಿಂದ ರಕ್ಷಿಸಲು ಸಹಾಯ ಮಾಡುತ್ತದೆ ಮತ್ತು ಸುಕ್ಕುಗಳು ಸೇರಿದಂತೆ ವಯಸ್ಸಾದ ಚಿಹ್ನೆಯನ್ನು ತಡೆಯಬಹುದು.



# ಮಧುಮೇಹಕ್ಕೆ ಅನುವಂಶೀಯತೆ ಕಾರಣವೇ?

ಆಸ್ಪತ್ರೆಯಲ್ಲಿ ತಪಾಸಣೆಗೆ ಬರುವವರ ಜೊತೆ ಮಾತನಾಡುವಾಗ ಆಗಾಗ ಒಂದು ಸ್ವಾರಸ್ಯಕರವಾದ ಚರ್ಚೆ ನಡೆಯುತ್ತದೆ. ಹೊಸದಾಗಿ ಡಯಾಬಿಟಿಸ್ ಪತ್ತೆಯಾದಾಗ, ನಾನು ಅವರಿಗೆ ಒಂದು ರೆಗ್ಯುಲರ್ ಪ್ರಶ್ನೆ ಕೇಳ್ತೀನಿ ನಿಮ್ಮ ಮನೇಲಿ ಅಪ್ಪ-ಅಮ್ಮ, ತಾತ-ಅಜ್ಜಿಗೆ ಯಾರಿಗಾದರೂ ಮಧು ಮೇಹ ಇತ್ತಾ? ಅದಕ್ಕೆ ಅವರು ಮುಖದಲ್ಲೊಂದು ಸಣ್ಣ ನಗು ತಂದುಕೊಂಡು ಹೇಳ್ತಾರೆ: ಹೌದು, ನಮ್ಮಪ್ಪನಿಗೆ ಇತ್ತು, ಅಮ್ಮನಿಗೂ ಇತ್ತು. ಅವರು ನಮಗೆ ಕೋಟಿಗಟ್ಟಲೆ ಆಸ್ತಿ-ಪಾಸ್ತಿ ಏನೂ ಮಾಡಿಡಲಿಲ್ಲ, ಆದ್ರೆ ಈ ಡಯಾಬಿಟಿಸ್ ಅನ್ನು ಮಾತ್ರ ಕರೆಕ್ಟಾಗಿ ನಮಗೆ ಬಳುವಳಿಯಾಗಿ ಕೊಟ್ಟು ಹೋಗಿದ್ದಾರೆ. ಅವರ ರಕ್ತಾನೇ ನನ್ನಲ್ಲೂ ಹರಿಯೋದು ಅಂದ್ಮೇಲೆ, ನನಗೂ ಬರಲೇಬೇಕಲ್ವಾ? ಇದರಲ್ಲಿ ಆಶ್ಚರ್ಯ ಏನಿದೆ ಬಿಡಿ, ದೇವ್ರು ಕೊಟ್ಟ ಪ್ರಸಾದ! ಅವರ ಈ ಮಾತು ಕೇಳೋಕೆ ತಮಾಷೆಯಾಗಿ ಕಂಡರೂ, ಇದರ ಹಿಂದೆ ನಮ್ಮ ಜನರ ಒಂದು ದೊಡ್ಡ 'ಶರಣಾಗತಿ' ಮನೋಭಾವ ಅಡಗಿದೆ. ನಮ್ಮಪ್ಪನಿಗೆ ಇತ್ತು, ಹಾಗಾಗಿ ನನಗೂ ಬಂತು. ಇದರಲ್ಲಿ ನನ್ನದೇನೂ ತಪ್ಪಿಲ್ಲ, ನಾನೇನು ಮಾಡೋಕೂ ಆಗಲ್ಲ ಅನ್ನೋದು ತಮ್ಮ ಜೀವನಶೈಲಿಯ ತಪ್ಪುಗಳನ್ನು ಮುಚ್ಚಿಡಲು ಬಳಸುವ ಅತ್ಯಂತ ಸುಲಭವಾದ ಎಸ್ಕೇಪ್ ರೂಟ್! ವೈದ್ಯಕೀಯ ವಿಜ್ಞಾನದಲ್ಲಿ ಟೈಪ್ 2 ಡಯಾಬಿಟಿಸ್ ಅನ್ನು ಒಂದು 'ಮಲ್ಟಿ-ಫ್ಯಾಕ್ಟೋರಿಯಲ್' ಸಮಸ್ಯೆ ಎಂದು ಕರೆಯುತ್ತೇವೆ. ಅಂದರೆ, ಇದು ಕೇವಲ ಒಂದೇ ಒಂದು ಕಾರಣದಿಂದ ಬರುವಂಥದ್ದಲ್ಲ ಬದಲಾಗಿ ಹಲವಾರು ಕಾರಣಗಳು ಒಟ್ಟಾಗಿ ಸೇರಿ ಸೃಷ್ಟಿಸುವ ಚಕ್ರವ್ಯೂಹವಿದು! ವಯಸ್ಸು, ಅತಿಯಾದ ತೂಕ, ದೈಹಿಕ ಶ್ರಮವಿಲ್ಲದ ಜೀವನಶೈಲಿ, ಮಾನಸಿಕ ಒತ್ತಡ ಮತ್ತು ಅನುವಂಶೀಯತೆ ಇವೆಲ್ಲವೂ ಅಥವಾ ಇವುಗಳಲ್ಲಿ ಕೆಲವು ಒಟ್ಟಾಗಿ ಸೇರಿ ಮಾಡುವ ಕಿತಾಪತಿ ಇದು. ಹಾಗಾಗಿ ಕೇವಲ ಅಪ್ಪ-ಅಮ್ಮನನ್ನು ದೂಷಿಸಿ ನಾವು ಕೈತೊಳೆದು ಕೊಳ್ಳುವಂತಿಲ್ಲ. ಅಪ್ಪ-ಅಮ್ಮನಿಗೆ ಮಧುಮೇಹ ಇದ್ದರೆ ಮಕ್ಕಳಿಗೂ ಬರುವ ಸಾಧ್ಯತೆ ಹೆಚ್ಚು ಎನ್ನುವುದು ಸತ್ಯ. ಆದರೆ, ಅದು ಬಂದೇ ಬರುತ್ತದೆ ಎನ್ನುವುದು ಶುದ್ಧ ಸುಳ್ಳು. ಇದಕ್ಕೆ ವೈದ್ಯಕೀಯ ಲೋಕದಲ್ಲಿ ಒಂದು ಅತ್ಯದ್ಭುತ ವಾದ ನಾಣ್ನುಡಿಯಿದೆ'ಜೆನೆಟಿಕ್ಸ್ ಲೋಡ್ಸ್ ದ ಗನ್, ಬಟ್ ಲೈಫ್‌ಸ್ಟೈಲ್ ಪುಲ್ಸ್ ದ ಟ್ರಿಗರ್' ಅಂದರೆ, ತಂದೆ-ತಾಯಿಯಿಂದ ಬಂದ ಅನುವಂಶೀಯತೆ ಅನ್ನೋದು ಗುಂಡು ತುಂಬಿಟ್ಟಿರುವ ಒಂದು ರಿವಾಲ್ವರ್ (ಬಂದೂಕು) ಇದ್ದ ಹಾಗೆ. ಆದರೆ, ಆ ರಿವಾಲ್ವರ್‌ನ 'ಟ್ರಿಗರ್' (ಕುದುರೆ) ಒತ್ತುವುದು ಮಾತ್ರ ನಿಮ್ಮದೇ ಕೈಯಲ್ಲಿದೆ! ದೈಹಿಕ ಶ್ರಮವಿಲ್ಲದ ದಿನಚರಿ, ತಿನ್ನುವ ಜಂಕ್ ಫುಡ್, ಬೇಕರಿ ತಿಂಡಿಗಳು, ಆಲಸ್ಯ ಮತ್ತು ಬೊಜ್ಜು ಇವೆಲ್ಲವೂ ಆ ಬಂದೂಕಿನ ಟ್ರಿಗರ್ ಒತ್ತುತ್ತವೆ.

ಮೈ ಬೆವರುವಂತೆ ದುಡಿದು, ಸರಿಯಾದ ತೂಕ ಕಾಪಾಡಿಕೊಂಡು ಆ ಟ್ರಿಗರ್ ಒತ್ತದೇ ಇದ್ದರೆ, ದೇಹದಲ್ಲಿ ಗುಂಡು ತುಂಬಿದ ಬಂದೂಕಿದ್ದರೂ ಅದು ಆಜೀವಪರ್ಯಂತ ಪೆಟ್ಟಿಗೆಯಲ್ಲೇ ಸೇಫ್ ಆಗಿರುತ್ತೆ. ಗುಂಡು ಹಾರುವುದೇ ಇಲ್ಲ! ಇದನ್ನು ಅರ್ಥಮಾಡಿಕೊಳ್ಳಲು ಇನ್ನೊಂದು ಉದಾಹರಣೆ ನಿಮ್ಮ ಜೇಬಿನಲ್ಲಿ ಒಂದಷ್ಟು ಹುಲ್ಲಿನ ಬೀಜಗಳಿವೆ ಅಂದುಕೊಳ್ಳಿ. ಅವುಗಳೇ ನಿಮ್ಮ 'ಜೆನೆಟಿಕ್ಸ್'. ಆ ಬೀಜಗಳನ್ನು ಕಾಂಕ್ರೀಟ್ ರಸ್ತೆಯ ಮೇಲೆ ಬಿಸಾಕಿದರೆ ಅವು ಮೊಳಕೆಯೊಡೆಯುತ್ತವಾ? ಇಲ್ಲ. ಅವು ಕಮರಿ ಹೋಗುತ್ತವೆ. ಆದರೆ, ಅದೇ ಬೀಜಗಳನ್ನು ಫಲವತ್ತಾದ ಮಣ್ಣಿನಲ್ಲಿ ಹಾಕಿ, ದಿನಾ ನೀರು, ಗೊಬ್ಬರ ಹಾಕಿದರೆ ಬೆಳೆದು ನಿಲ್ಲುತ್ತವೆ! ಇಲ್ಲಿ ಬೀಜಗಳು ಅಪ್ಪ-ಅಮ್ಮನಿಂದ ಬಂದಿರಬಹುದು.

# ಹಲಸಿನ ಹಣ್ಣಿನ ಬೀಜ ಇನ್ಮುಂದೆ ಹಲಸಿನ ಬೀಜಗಳನ್ನು ಬಿಸಾಡಬೇಡಿ

ಬೇಸಗೆಯಲ್ಲಿ ಹೆಚ್ಚಾಗಿ ಸಿಗುವ ಹಣ್ಣುಗಳಲ್ಲಿ ಹಲಸು ಪ್ರಮುಖವಾದುದು. ಆದರೆ ಈ ಹಣ್ಣನ್ನು ತಿಂದ ನಂತರ ಅದರ ಬೀಜಗಳನ್ನು ಎಸೆದು ಬಿಡುತ್ತೇವೆ. ಇದರಲ್ಲಿ ಹಲವು ರೀತಿಯ ಆರೋಗ್ಯ ಲಾಭಗಳು ಇವೆ ಎಂಬುದು ನಿಮಗೆ ತಿಳಿದಿದೆಯೇ? ಹೌದು, ಕೆಲವೊಂದು ಮನೆಗಳಲ್ಲಿ ಈ ಬೀಜವನ್ನು ಸಂಬಾರಿನ ಜತೆ ಬಳಕೆ ಮಾಡುತ್ತಾರೆ. ಅಲ್ಲದೆ ವಿವಿಧ ಖಾದ್ಯವಾಗಿ ತಯಾರಿಸಿ ಸೇವನೆ ಮಾಡುವವರು ಬಹಳಷ್ಟು ಮಂದಿ ಇದ್ದಾರೆ. ಹಲಸಿನ ಬೀಜ ಪ್ರೋಟೀನ್, ಫೈಬರ್, ಜೀವಸತ್ವ ಹೊಂದಿದ್ದು ದೇಹವು ಸರಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುವ ಪ್ರಮುಖ ಖನಿಜಗಳಿಂದ ಸಮೃದ್ಧವಾಗಿದೆ.

ಹಲಸಿನ ಬೀಜಗಳಲ್ಲಿ ಇರುವ ನಾರಿನ ಅಂಶವು ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಇದು ನಿಯಮಿತ ಕರುಳಿನ ಚಲನೆಯನ್ನು ಉತ್ತೇಜಿಸಿ ಫೈಬರ್ ಪ್ರಿಬಯಾಟಿಕ್ ಆಗಿ ಕಾರ್ಯನಿರ್ವಹಿಸುತ್ತದೆ. ಇದರ ನಿಯಮಿತ ಸೇವನೆಯು ಜೀರ್ಣಕಾರಿ ಅಸ್ವಸ್ಥತೆಯನ್ನು ಕಡಿಮೆ ಮಾಡಿ ಮಲಬದ್ಧತೆಯನ್ನು ತಡೆಯುತ್ತದೆ. ಹಲಸಿನ ಬೀಜಗಳಲ್ಲಿ ಕಂಡುಬರುವ ಪೊಟ್ಯಾಸಿಯಮ್ ಆರೋಗ್ಯಕರ ರಕ್ತದೊತ್ತಡವನ್ನು ಕಾಪಾಡಲು ಸಹಾಯ ಮಾಡುತ್ತದೆ. ಫೈಬರ್ ಹಾಗೂ ಕೊಲೆಸ್ಟ್ರಾಲ್ ಮಟ್ಟವನ್ನು ನಿರ್ವಹಿಸಲು ಸಹಾಯ ಮಾಡಿ, ಹೃದಯರಕ್ತನಾಳದ ಆರೋಗ್ಯವನ್ನು ಕಾಪಾಡುತ್ತದೆ. ಹಾಗಾಗಿ ಈ ಬೀಜವನ್ನು ಬಿಸಾಡುವ ಬದಲು ನಿಮ್ಮ ಆಹಾರದಲ್ಲಿ ಉಪಯೋಗಿಸಿಕೊಳ್ಳಿ. ತೂಕ ಇಳಿಸಬೇಕು ಎಂದು ಇದ್ದವರಿಗೆ ಹಲಸಿನ ಹಣ್ಣಿನ ಬೀಜ ಬಹಳಷ್ಟು ಉಪಯುಕ್ತ. ಇದು ತಿಂದರೆ ಹೊಟ್ಟೆ ತುಂಬಿದ ಅನುಭವ ನೀಡಲಿದ್ದು ಅನಗತ್ಯ ತಿಂಡಿ ಮತ್ತು ಅತಿಯಾಗಿ ತಿನ್ನುವುದನ್ನು ಕಡಿಮೆ ಮಾಡಬಹುದು. ಸಮತೋಲಿತ ಆಹಾರದ ಭಾಗವಾಗಿ ತೂಕವನ್ನು ಕಾಪಾಡಿಕೊಳ್ಳಲು ಬಯಸುವವರಿಗೆ ಪ್ರಯೋಜನಕಾರಿ. ಹಲಸಿನ ಬೀಜ ಕಬ್ಬಿಣ ಮತ್ತು ಸತು ಸೇರಿದಂತೆ ಜೀವಸತ್ವಗಳು ಮತ್ತು ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿದೆ. ಅದರಲ್ಲೂ ರೋಗನಿರೋಧಕ ವ್ಯವಸ್ಥೆಯನ್ನು ಬೆಂಬಲಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಹವು ಸೋಂಕುಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಹಾಯ ಮಾಡುತ್ತದೆ.ಹಲಸಿನ ಬೀಜಗಳನ್ನು ಎಂದಿಗೂ ಹಸಿಯಾಗಿ ತಿನ್ನಬಾರದು. ಆರೋಗ್ಯಪೂರ್ಣ ತಿಂಡಿಯಾಗಿ ಅವುಗಳನ್ನು ಬೇಯಿಸಿ ಸೇವಿಸಿ.ಬೇಕಿಂಗ್ ಅಥವಾ ಅಡುಗೆಗಾಗಿ ಅವುಗಳನ್ನು ಹಿಟ್ಟಿನಲ್ಲಿ ಬೆರೆಸಿ.



ಕರಿ, ಸಂಬಾರ್, ಸೂಪ್‌ಗೆ ಸೇರಿಸಿ ಅವುಗಳ ಪೌಷ್ಟಿಕಾಂಶದ ಮೌಲ್ಯವನ್ನು ಹೆಚ್ಚಿಸಿ. ಈಗಿನ ಬಹಳಷ್ಟು ಮಂದಿ ಅಜೀರ್ಣತೆ, ಗ್ಯಾಸ್ಟ್ರಿಕ್, ಮಲಬದ್ಧತೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂತಹವರಿಗೆ ಹಲಸಿನ ಹಣ್ಣಿನ ಬೀಜಗಳ ಪುಡಿ ರಾಮಬಾಣವಾಗಿ ಕೆಲಸ ಮಾಡುತ್ತದೆ.

# ಶಿಥಿಲಾವಸ್ಥೆಯ ಒಳಚರಂಡಿ ಮೇಲ್ದರ್ಜೆಗೇರಿಸಲು ಸಾರ್ವಜನಿಕ ಉದ್ಯಮಗಳ ಸಮಿತಿ ಶಿಫಾರಸು

## ಯೋಜನೆಯನ್ನು ರೂಪಿಸುವಂತೆ 16ನೇ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಸಮಿತಿಯು ಸರ್ಕಾರಕ್ಕೆ ಮಹತ್ವದ ಶಿಫಾರಸು ಮಾಡಿದೆ

• **ಉದಯವಾಹಿನಿ ಮಂಗಳೂರು:**

ಸ್ಮಾರ್ಟ್ ಸಿಟಿ ಮಂಗಳೂರಿನ ನಗರದಾದ್ಯಂತ ತೀವ್ರವಾಗಿ ಹದಗೆಟ್ಟಿರುವ ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮೇಲ್ದರ್ಜೆಗೇರಿಸಲು ಮತ್ತು ಸಮಗ್ರ ಅಭಿವೃದ್ಧಿಗೆ ಪೂರಕವಾಗಿ 1,250 ಕೋಟಿ ರೂ. ಅಂದಾಜು ವೆಚ್ಚದ ಯೋಜನೆಯನ್ನು ರೂಪಿಸುವಂತೆ 16ನೇ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಸಮಿತಿಯು ಸರ್ಕಾರಕ್ಕೆ ಮಹತ್ವದ ಶಿಫಾರಸು ಮಾಡಿದೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ತಿಳಿಸಿದ್ದಾರೆ.

ಈ ಬಗ್ಗೆ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಇತ್ತೀಚೆಗೆ ಮಂಗಳೂರಿಗೆ ಭೇಟಿ ನೀಡಿದ್ದ 20 ಶಾಸಕರನ್ನೊಳಗೊಂಡ ಸಾರ್ವಜನಿಕ ಉದ್ಯಮಗಳ ಸಮಿತಿಯು ನಗರದ ಒಳಚರಂಡಿ ವ್ಯವಸ್ಥೆಯ ಗಂಭೀರ ಸ್ಥಿತಿಯನ್ನು ಪರಿಶೀಲಿಸಿ ಈ ವರದಿಯನ್ನು ನೀಡಿದೆ ಎಂದರು.ಸಚಿವರ ಭೇಟಿ ಮತ್ತು ಡಿಪಿಆರ್ ಸಿದ್ಧತೆಗೆ

**1.ಶೀಘ್ರದಲ್ಲೇ ಮಂಗಳೂರಿಗೆ ಭೇಟಿ**
**2.ಜಲ ಸಂಸ್ಕರಣಾ ಘಟಕ ಆಧುನೀಕರಣ**
**3.ಹೊಸ ವೆಟ್‌ವೆಲ್‌ಗಳ ನಿರ್ಮಾಣ**

**ಸೂಚನೆ:** ಸಮಿತಿಯ ವರದಿ ಬೆನ್ನಲ್ಲೇ ಕಾರ್ಯಪ್ರವೃತ್ತರಾಗಿರುವ ಎಂಎಲ್‌ಸಿ ಐವನ್ ಡಿಸೋಜಾ, ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಹಾಗೂ ಎಸಿಎಸ್ ಅವರನ್ನು ಭೇಟಿ ಮಾಡಿ ಪರಿಸ್ಥಿತಿಯ ಗಂಭೀರತೆಯನ್ನು ಮನವರಿಕೆ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

ನಗರಾಭಿವೃದ್ಧಿ ಸಚಿವರು ಶೀಘ್ರದಲ್ಲೇ ಮಂಗಳೂರಿಗೆ ಭೇಟಿ ನೀಡಿ ಕೂಲಂಕಷ ಪರಿಶೀಲನೆ ನಡೆಸಲಿದ್ದಾರೆ. ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ಸುದೀರ್ಘ ಚರ್ಚೆ ನಡೆಯಲಿದೆ. ಈಗಾಗಲೇ ತಕ್ಷಣವೇ ವಿವರವಾದ ಯೋಜನಾ ವರದಿ ಸಿದ್ಧಪಡಿಸಲು ಸಮಾಲೋಚಕರನ್ನು ನೇಮಕ ಮಾಡುವಂತೆ ನಗರಾಭಿವೃದ್ಧಿ ಇಲಾಖೆಯು ಸರ್ಕಾರಕ್ಕೆ ಪತ್ರ ಬರೆದಿದೆ ಎಂದು ಐವನ್ ಡಿಸೋಜಾ ಮಾಹಿತಿ ನೀಡಿದರು.1,250 ಕೋಟಿ ರೂ. ಯೋಜನೆಯ ಮುಖ್ಯ ಉದ್ದೇಶಗಳುಸಮಿತಿಯ ಶಿಫಾರಸಿನ ಅನ್ವಯ ಈ ಬೃಹತ್ ಯೋಜನೆಯು ಈ ಕೆಳಗಿನ ಪ್ರಮುಖ ಅಂಶಗಳನ್ನು ಒಳಗೊಂಡಿರಲಿದೆ.

**ಎಸ್‌ಟಿಪಿ ಮತ್ತು ವೆಟ್‌ವೆಲ್ ಉನ್ನತೀಕರಣ:** ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಜಲ ಸಂಸ್ಕರಣಾ ಘಟಕಗಳ ಆಧುನೀಕರಣ ಮತ್ತು ಹೊಸ ವೆಟ್‌ವೆಲ್‌ಗಳ ನಿರ್ಮಾಣ.

> ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮೇಲ್ದರ್ಜೆಗೇರಿಸಲು 1,250 ಕೋಟಿ ರೂ. ಅಂದಾಜು ವೆಚ್ಚದ ಯೋಜನೆಯನ್ನು ರೂಪಿಸುವಂತೆ 16ನೇ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಸಮಿತಿಯು ಸರ್ಕಾರಕ್ಕೆ ಮಹತ್ವದ ಶಿಫಾರಸು ಮಾಡಿದೆ ಎಂದು ತಿಳಿಸಿದ್ದಾರೆ.
>
> **ಎಂಎಲ್‌ಸಿ ಐವನ್ ಡಿಸೋಜಾ**

**ನೀರಿನ ಮರುಬಳಕೆ:** ಪ್ರಸ್ತುತ ಸಂಸ್ಕರಿಸಿದ ನೀರನ್ನು ರಾಜಕಾಲುವೆಗಳ ಮೂಲಕ ನದಿಗಳಿಗೆ ಹರಿಸಿ ಕಲುಷಿತಗೊಳಿಸಲಾಗುತ್ತಿದೆ. ಹೊಸ ಯೋಜನೆಯಲ್ಲಿ ಈ ನೀರಿನ ಮರುಬಳಕೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

**ಕಲುಷಿತ ನೀರು:** ಕಳವಳ ವ್ಯಕ್ತಪಡಿಸಿದ ಐವನ್ ಮಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ 1952ರಲ್ಲಿ ಆರಂಭಗೊಂಡ ಒಳಚರಂಡಿ ವ್ಯವಸ್ಥೆ ಇಂದಿಗೂ ಅಸಮರ್ಪಕವಾಗಿದೆ. ಇತ್ತೀಚೆಗೆ ಕದ್ರಿ ಭಾಗದಲ್ಲಿ ಕುಡಿಯುವ ನೀರಿನ ಪೈಪ್‌ಲೈನ್‌ಗೆ ಒಳಚರಂಡಿ ನೀರು ಸೇರಿ ಸಾರ್ವಜನಿಕರು ಅಸ್ವಸ್ಥಗೊಂಡಿದ್ದರು. ಬೋಳಾರದ ದೇವಸ್ಥಾನದ ಸುತ್ತಮುತ್ತಲಿನ ಮನೆಗಳ ಬಾವಿ ನೀರು ಕೂಡ ಕಲುಷಿತಗೊಂಡಿದೆ. ನಗರದ ಹೃದಯಭಾಗದಲ್ಲೂ ಒಳಚರಂಡಿಗಾಗಿ ಪಿಟ್‌ಗಳನ್ನೇ ಬಳಸುವ ಸ್ಥಿತಿ ಇದೆ ಎಂದು ಅವರು ವಿಷಾದಿಸಿದರು.

**ರಾಜಕೀಯ ಬದಿಗಿಟ್ಟು ಒಟ್ಟಾಗಿ ಶ್ರಮಿಸಿ:** ಈ ಹಿಂದೆ ಬಿಜೆಪಿ ಆಡಳಿತವಿದ್ದಾಗ ಪಾಲಿಕೆ ಸಭೆಯಲ್ಲಿ ಧ್ವನಿ ಎತ್ತಿದಾಗ ಎಲ್ಲವೂ ಸಮರ್ಪಕವಾಗಿದೆ ಎಂದಿದ್ದರು. ಆದರೆ ಈಗ ಕಲುಷಿತ ನೀರಿನ ಸಮಸ್ಯೆ ಎದುರಾದಾಗ ಶಾಸಕರು ಕಾಂಗ್ರೆಸ್ ಕಡೆಗೆ ಬೆರಳು ತೋರಿಸುತ್ತಿದ್ದಾರೆ. ಕಳೆದ 8 ವರ್ಷಗಳಿಂದ ಶಾಸಕರಾಗಿರುವ ವೇದವ್ಯಾಸ ಕಾಮತ್ ಅವರು ಈ ಸಮಗ್ರ ಯೋಜನೆಗಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಏನು ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನಿಸಿದ ಐವನ್, ಆರೋಪ-ಪ್ರತ್ಯಾರೋಪಗಳಿಂದ ಜನರಿಗೆ ಮೂಲಭೂತ ಸೌಕರ್ಯ ಸಿಗುವುದಿಲ್ಲ ಎಂದರು.

ಈ ಬೃಹತ್ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳ ಅನುದಾನ ಬೇಕಿರುವುದರಿಂದ ಸ್ಥಳೀಯ ಶಾಸಕರು ಮತ್ತು ಸಂಸದರು ರಾಜಕೀಯ ಬದಿಗಿಟ್ಟು ಒಟ್ಟಾಗಿ ಸಹಕರಿಸಬೇಕು ಎಂದು ಮನವಿ ಮಾಡಿದರು.ಮಾಧ್ಯಮಗೋಷ್ಠಿಯಲ್ಲಿ ಪ್ರಮುಖರಾದ ಶಶಿಧರ ಹೆಗ್ಡೆ, ಅಪ್ಪಿ, ಪ್ರಕಾಶ್ ಸಾಲಿಯಾನ್, ಭಾಸ್ಕರ ರಾವ್, ಮೀನಾ ಟೆಲ್ಲಿಸ್, ನಾಗೇಂದ್ರ ಕುಮಾರ್, ರೆಹಮಾನ್, ನವೀನ್ ಡಿಸೋಜಾ ಉಪಸ್ಥಿತರಿದ್ದರು.

### ಕಾಲಮಿತಿಯ ಅನುಷ್ಠಾನ

ಈ ಹಿಂದಿನ ಕಾಮಗಾರಿಗಳಲ್ಲಿದ್ದ ನ್ಯೂನತೆಗಳನ್ನು ಸಿಎಜಿ ಲೆಕ್ಕ ಪರಿಶೋಧನೆಯಲ್ಲಿ ಗುರುತಿಸಿದ್ದು, ಹೊಸ ಯೋಜನೆಯಲ್ಲಿ ಇಂತಹ ತಪ್ಪುಗಳು ಮರುಕಳಿಸದಂತೆ ಹಾಗೂ ದುಂದುವೆಚ್ಚ ತಡೆಯಲು ಎಚ್ಚರಿಕೆ ವಹಿಸಲಾಗುವುದು.ನಿರಂತರ ನಗರೀಕರಣ ಮತ್ತು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಈ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಮುಗಿಸಲು ಸಮಿತಿ ಸೂಚಿಸಿದೆ.

# ಇನ್ನರ್ ವೀಲ್ ಕ್ಲಬ್ ನಿಂದ ಸ್ವಚ್ಛತಾ ಅಭಿಯಾನ:

• **ಉದಯವಾಹಿನಿ ಹೊಸಪೇಟೆ:**

ನಗರದ ನೆಹರೂ ಕಾಲೋನಿಯಲ್ಲಿ ಇನ್ನರ್ ವೀಲ್ ಕ್ಲಬ್ ವತಿಯಿಂದ ಕಸ ನಿರ್ವಹಣೆ, ಸ್ವಚ್ಛತಾ ಜಾಗೃತಿ ಹಾಗೂ ಬೆಂಚ್ ಉದ್ಘಾಟನೆ ಕಾರ್ಯಕ್ರಮ ಜರುಗಿತು.

ಪೌರಾಯುಕ್ತ ಎರಗುಡಿ ಶಿವಕುಮಾರ, 31ನೇ ವಾರ್ಡಿನ ನಗರಸಭಾ ಸದಸ್ಯ ತಾರಿಹಳ್ಳಿ ಜಂಬುನಾಥ ಮತ್ತು ಇನ್ನರ್ ವಿಲ್ ಅಧ್ಯಕ್ಷೆ ರಾಜೇಶ್ವರಿ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೌರಾಯುಕ್ತ ಎರಗುಡಿ ಶಿವಕುಮಾರ್, ನಗರದ ಸ್ವಚ್ಛತೆ ಕಾಪಾಡಲು ನಾಗರಿಕರು ಸಹಕರಿಸಬೇಕು, ಸುಪ್ರೀಂ ಕೋರ್ಟ್ನ ನಿರ್ದೇಶನದಂತೆ ಕಸವನ್ನು ಹಸಿ ಕಸ, ಒಣ ಕಸ, ಸ್ಯಾನಿಟರಿ ವೇಸ್ಟ್ ಮತ್ತು ಸ್ಪೆಷಲ್ ವೇಸ್ಟ್ ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ ನೀಡುವಂತೆ ನಾಗರಿಕರಿಗೆ ಸೂಚಿಸಿದರು. 31 ನೇ ವಾರ್ಡಿನ ನಗರಸಭಾ ಸದಸ್ಯ ತಾರಿಹಳ್ಳಿ ಜಂಬುನಾಥ ಮಾತನಾಡಿ, ಪೌರಾಯುಕ್ತ ಶಿವಕುಮಾರ್ ಅವರ ದೂರದೃಷ್ಟಿಯಿಂದ ನಗರದಲ್ಲಿ ಸ್ವಚ್ಛತಾ ಕಾರ್ಯಗಳು ವೇಗವಾಗಿ ನಡೆಯುತ್ತಿವೆ ಎಂದು ಶ್ಲಾಘಿಸಿದರು. ಅಲ್ಲದೆ, ದೀಪಾಯನ ಶಾಲಾ ಮೈದಾನ, ಅಗ್ನಿಶಾಮಕ ಕಚೇರಿ ಹಾಗೂ


ಉದಯವಾಹಿನಿ ಚಿತ್ರ

ವಿವೇಕಾನಂದ ನಗರದಲ್ಲಿ ಬೆಂಚ್ಗಳ ಅಳವಡಿಕೆ ಸೇರಿದಂತೆ ಇನ್ನರ್ ವೀಲ್ ಕ್ಲಬ್ನ ಸಾಮಾಜಿಕ ಕಾರ್ಯಗಳನ್ನು ಅವರು ಶ್ಲಾಘಿಸಿದರು. ಅಲ್ಲದೆ ವಾರ್ಡ್ ಮಟ್ಟದಲ್ಲಿ ಮಹಿಳಾ ಸ್ವಚ್ಛತಾ ಸಿಬ್ಬಂದಿಯನ್ನು ನೇಮಕ ಮಾಡಿರುವುದು ಈ ಭಾಗದ ವಿಶೇಷತೆಯಾಗಿದ್ದು, ಅವರು ಪ್ರತಿ ಮನೆಗೆ ಭೇಟಿ ನೀಡಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಂಸಾಂಬ ಶಾರದಾಶ್ರಮದ ಮಾತಾ ಪ್ರಬೋಧಮಯಿ, ಇನ್ನರ್ ವಿಲ್ ಕ್ಲಬ್ ಅಧ್ಯಕ್ಷೆ ರಾಜೇಶ್ವರಿ, ಪತ್ರಕರ್ತೆ ರೇಖಾ ಪ್ರಕಾಶ್ ಮಾತನಾಡಿದರು.

# ಬೆಳಗಾವಿಯಲ್ಲಿ ಬಿರುಗಾಳಿಗೆ ಧರೆಗುರುಳಿದ ಬೃಹತ್ ಹುಣಸೆಮರ

• **ಉದಯವಾಹಿನಿ ಬೆಳಗಾವಿ:**

ಬೆಳಗಾವಿ ನಗರದಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆ ಹಾಗೂ ಬಿರುಗಾಳಿಯ ಆರ್ಭಟಕ್ಕೆ ಇಲ್ಲಿನ ಖಾಸಭಾಗದ ಉಪ್ಪಾರ ಗಲ್ಲಿಯಲ್ಲಿ ಬೃಹತ್ ಗಾತ್ರದ ಹುಣಸೆ ಮರವೊಂದು ಬುಡಸಮೇತ ಧರೆಗುರುಳಿದೆ. ಇದರ ಪರಿಣಾಮ ಮರದ ಬಳಿ ಇದ್ದ ನಾಲ್ಕು ಮನೆಗಳಿಗೆ ತೀವ್ರ ಹಾನಿಯುಂಟಾಗಿದೆ. ಆದ್ರೆ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಅನಿಲ್ ಮುಟ್ಟೇಕರ್, ಆನಂದ ಭದ್ವಾಂಕರ್, ಏಕನಾಥ ಭದ್ವಾಂಕರ್ ಹಾಗೂ ಪ್ರಶಾಂತ ಗೋರ್ಲೆ ಎಂಬುವರ ಮನೆಗಳ ಮೇಲೆ ಈ ಬೃಹತ್ ಮರ ಉರುಳಿ ಬಿದ್ದಿದೆ. ಮನೆಯಲ್ಲಿದ್ದ ದಿನಸಿ ಸಾಮಗ್ರಿಗಳು, ಬಟ್ಟೆ, ಬರೆ ಸೇರಿದಂತೆ ಅಗತ್ಯ ವಸ್ತುಗಳು ಮರದಡಿ ಸಿಲುಕಿ ಹಾಳಾಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ.ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ತೆರವು ಕಾರ್ಯಾಚರಣೆ ಆರಂಭಿಸಿದರು. ಮನೆಯ ಮೇಲೆಯೇ ಬೃಹತ್ ಮರ ಬಿದ್ದಿದ್ದರಿಂದ ಇರಲು ಸೂರಿಲ್ಲದೆ ಈ ನಾಲ್ಕು ಕುಟುಂಬಗಳು


ಉದಯವಾಹಿನಿ ಚಿತ್ರ

ಸದ್ಯ ಬೀದಿಗೆ ಬಿದ್ದಿವೆ. ಈ ಮಳೆ ಮತ್ತು ಗಾಳಿ ನಮ್ಮ ಬದುಕನ್ನೇ ಕಸಿದುಕೊಂಡಿದೆ ಎಂದು ಸಂತ್ರಸ್ತರು ಕಣ್ಣೀರು ಹಾಕಿದ್ದಾರೆ. ಮರ ಬೀಳುವ ಮುನ್ಸೂಚನೆಯನ್ನು ಮೊದಲೇ ಸಿಗುತ್ತಿದ್ದಂತೆ ನಾವೆಲ್ಲಾ ಮನೆಯಿಂದ ಹೊರಗೆ ಓಡಿ ಬಂದೆವು. ಹೀಗಾಗಿ, ನಮಗೆ ಏನೂ ತೊಂದರೆ ಆಗಲಿಲ್ಲ. ಆದರೆ, ಮನೆ ಕಳೆದುಕೊಂಡು ನಮ್ಮ ಬದುಕು ಈಗ ಬೀದಿಗೆ ಬಿದ್ದಿದೆ. ನಾವು ಬಡವರು. ದಯವಿಟ್ಟು ಸರ್ಕಾರ, ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ನಮಗಾದ ನಷ್ಟ ತುಂಬಿಕೊಡಬೇಕು. ಮನೆ ಕಟ್ಟಿಸಿಕೊಡುವಂತೆ ತಮ್ಮ ಅಳಲು ತೋಡಿಕೊಂಡಿದ್ದಾರೆ.ಕುಂದಾ ನಗರಿಯ ಪಿಡಬ್ಲುಡಿ ಕ್ವಾಟರ್ಸ್, ವಡಗಾವಿ, ಕೋರ್ಟ್ ಸಮೀಪ, ಹನುಮಾನ್ ನಗರ ಸೇರಿ ವಿವಿಧೆಡೆ 20ಕ್ಕೂ ಅಧಿಕ ಮರಗಳು ಬಿದ್ದಿದ್ದು, ಪಾಲಿಕೆ ಸಿಬ್ಬಂದಿ ಅವುಗಳನ್ನು ರಸ್ತೆಯಿಂದ ತೆರವುಗೊಳಿಸಿದ್ದಾರೆ. ಇಂದು ಕೂಡ ಮಳೆ ಕಡಿಮೆ ಇದ್ದರೂ ಜೋರಾಗಿ ಗಾಳಿ ಬೀಸುತ್ತಿದೆ. ಇದು ಜನರಲ್ಲಿ ಆತಂಕ ಸೃಷ್ಟಿಸಿದೆ.

# ಸ್ವಚ್ಛತೆಗೆ ಸಾರ್ವಜನಿಕರ ಸಹಕಾರ ಅಗತ್ಯ: ತಾ.ಪಂ. ಇಒ ಚಂದ್ರಶೇಖರ ಕಂದಕೂರು

• **ಉದಯವಾಹಿನಿ ಗಜೇಂದ್ರಗಡ:**

ಬೆಳಂಬೆಳ್ಳಿಗೆ ಜಿಟಿ ಜಿಟಿ ಮಳೆಯ ಹನಿ.. ಮೊಡ ಕವಿದ ವಾತಾವರಣ.. ಇದರ ನಡುವೆ ಎಲ್ಲರ ಕೈಯಲ್ಲಿ ಹ್ಯಾಂಡ್ ಗ್ಲೌಜ್, ಮುಖಕ್ಕೆ ಮಾಸ್ಕ್, ಪೊರಕೆ, ಪುಟ್ಟಿ, ಹಿಡಿದು ಕಸ ಗೂಡಿಸುವ ಮೂಲಕ ವಿಶೇಷವಾಗಿ ಶ್ರಮದಾನ ಮಾಡುತ್ತಿರುವುದು ಕಂಡು ಬಂದಿದ್ದು ಪಟ್ಟಣದ ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ. ಹೌದು! ಇದು ತಾಲ್ಲೂಕು ಪಂಚಾಯತ ಗಜೇಂದ್ರಗಡ, ತಾಲ್ಲೂಕು ಗ್ಯಾರಂಟಿ ಸಮಿತಿ, ಪುರಸಭೆ, ಕೆಎಸ್‌ಆರ್ಟಿಸಿ ಇಲಾಖೆ, ಎಲ್ಲಾ ಗ್ರಾಮ ಪಂಚಾಯತಿಗಳ ಸಹಯೋಗದಲ್ಲಿ ಹಾಗೂ ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷರ ನೇತೃತ್ವದಲ್ಲಿ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಈ ವೇಳೆ ಬಸ್ ನಿಲ್ದಾಣದ ಮುಂಭಾಗ, ಅಕ್ಕ-ಪಕ್ಕ, ಇಂಧಿರಾ ಕ್ಯಾಂಟಿನ್, ಶೌಚಾಲಯ ಸುತ್ತಮುತ್ತ ಸೇರಿ ಬಸ್ ನಿಲ್ದಾಣದ ಆವರಣವನ್ನು ಬೆಳ್ಳಿಗೆ 6-30 ರಿಂದ 9 ಗಂಟೆಯವರೆಗೂ ಸ್ವಚ್ಛಗೊಳಿಸಿ, ಕಸವನ್ನು ತೆರವುಗೊಳಿಸಿ ಹಂದವಾಗಿಸಿದ್ದು, ಪ್ರಯಾಣಿಕರಿಗೆ, ಸಾರ್ವಜನಿಕರಿಗೆ ಗಮನ ಸೆಳೆಯಿತು.

ನಂತರ ಗ್ಯಾರಂಟಿ ಸಮಿತಿ ಅಧ್ಯಕ್ಷ ಶರಣಪ್ಪ ಬೆಟಗೇರಿ ಅವರು ಸ್ವತಃ ಬಸ್ ನಿಲ್ದಾಣದ ಆವರಣದ ತುಂಬಾ ಸ್ಯಾನಿಟೇಜರ್ ಸಿಂಪರಣೆ ಮಾಡಿದರು. ನಂತರ ಬಸ್ ನಿಲ್ದಾಣ ಮುಂಭಾಗದ ಅಂಗಡಿಗಳಿಗೆ ಬೇಟಿ ನೀಡಿ ಕಸ ಎಲ್ಲೆಂದರಲ್ಲಿ ಎಸೆಯಬೇಡಿ ಒಂದು ಕಡೆ ಸಂಗ್ರಹಣೆ ಮಾಡಿ ಪುರಸಭೆ ವಾಹನ ಬಂದಾಗ ಹಾಕಿ. ಸ್ವಚ್ಛತೆಗೆ ಆದ್ಯತೆ ನೀಡಲು ತಿಳಿಸಿದರು.

ಈ ವೇಳೆ ಗ್ಯಾರಂಟಿ ಸಮಿತಿ ತಾಲ್ಲೂಕು ಅಧ್ಯಕ್ಷ ಶರಣಪ್ಪ ಬೆಟಗೇರಿ ಮಾತನಾಡಿ, ಸ್ವಚ್ಛತೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಮಾತನಾಡಿ, ಪ್ರತಿಯೊಬ್ಬರೂ ವೈಯಕ್ತಿಕ ಸ್ವಚ್ಛತೆ ಹಾಗೂ ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದರೊಂದಿಗೆ


ಉದಯವಾಹಿನಿ ಚಿತ್ರ

ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಆರೋಗ್ಯಯುತ ಸಮಾಜ ನಿರ್ಮಾಣವಾಗುತ್ತದೆ. ಸರ್ಕಾರದ ಸ್ವಚ್ಛತಾ ಅಭಿಯಾನಗಳು ಯಶಸ್ವಿಯಾಗಲು ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಸಾರ್ವಜನಿಕರು ಕಸವನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ. ಒಂದು ಕಡೆ ಕಸ ಸಂಗ್ರಹವಾಗಿ ಹಾಕಿದರೆ ಆ ಕಸವನ್ನು ತೆಗೆದುಕೊಂಡು ಹೋಗಲಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಸಂಗ್ರಹಿಸುವ ಮೂಲಕ ಗ್ರಾಮದ ಸ್ವಚ್ಛತೆಗೆ ಗ್ರಾಮ ಪಂಚಾಯತಿ ಶ್ರಮಿಸುತ್ತಿದೆ. ಅವರೊಂದಿಗೆ ಜನರು ಸಹಕರಿಸಿ ಕೈಜೋಡಿಸಿದಾಗ ಸುಂದರ ಗ್ರಾಮವನ್ನಾಗಿಸಬಹುದು. ಗ್ರಾಮ ಸ್ವಚ್ಛತೆಗೆ ಆದ್ಯತೆ ನೀಡಿದಾಗ ಮಾತ್ರ ಗಾಂಧಿಜೀಯವರ ಕಂಡ ಕನಸು ನನಸಾಗಿಸಲು ಸಾಧ್ಯ ಎಂದರು. ಈ ಸಂದರ್ಭದಲ್ಲಿ ತಾಲ್ಲೂಕು ಗ್ಯಾರಂಟಿ ಸಮಿತಿ ಸರ್ವಸದಸ್ಯರು, ಸಹಾಯಕ ನಿರ್ದೇಶಕರು ಬಸವರಾಜ ಬಡಿಗೇರ್, ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಘಟಕದ ವ್ಯವಸ್ಥಾಪಕ ಕೆ.ಎಸ್. ಜಿಗಳೂರು, ತಾಲ್ಲೂಕು ಯೋಜನಾಧಿಕಾರಿಗಳು ಅರವಿಂದ ಬಂಡಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ ಸಿಬ್ಬಂದಿಗಳು, ಪೌರ ಕಾರ್ಮಿಕರು ಶ್ರಮದಾನದಲ್ಲಿ ಭಾಗವಹಿಸಿದ್ದರು.

# ಮಳೆಯ ಕೊರತೆಯ ನಡುವೆ ತುಂಬಿದ ತುಂಗಾ ಅಣೆಕಟ್ಟು

• **ಉದಯವಾಹಿನಿ ಶಿವಮೊಗ್ಗ:**

ರಾಜ್ಯದ ಸಣ್ಣ ಹಾಗೂ ಮುಂಗಾರಿನಲ್ಲಿ ತುಂಬುವ ಮೊದಲ ಡ್ಯಾಂ ಎಂಬ ಹೆಗ್ಗಳಿಕೆ ಪಡೆದಿರುವ ಶಿವಮೊಗ್ಗದ ತುಂಗಾ ಅಣೆಕಟ್ಟು ಮಳೆ ತಡವಾದ್ರು ಸಹ ಭರ್ತಿಯಾಗಿದೆ. ಅಣೆಕಟ್ಟೆಯ ಹಿನ್ನೀರಿನ ಭಾಗದಲ್ಲಿ ಉತ್ತಮ ಮಳೆಯಾಗಿರುವ ಕಾರಣ, ಹಾಗೇ ತಡರಾತ್ರಿ ಮಳೆ ಹೆಚ್ಚಾದ ಕಾರಣಕ್ಕೆ ಭಾನುವಾರ ತುಂಗಾ ಅಣೆಕಟ್ಟೆಯಿಂದ 10 ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ ನೀರು ಬಿಡಲಾಗುತ್ತಿದೆ. ತುಂಗಾ ಅಣೆಕಟ್ಟೆಗೆ 19,708 ಕ್ಯೂಸೆಕ್ ನೀರು ಒಳ ಹರಿವು ಇದೆ. ಇದರಿಂದ ನದಿಗೆ 17,649 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.


ಉದಯವಾಹಿನಿ ಚಿತ್ರ

ಮುಂಗಾರು ಬೇಗನೇ ಪ್ರಾರಂಭವಾಗಿದ್ದಿದ್ದರೆ ಜೂನ್ ಎರಡನೇ ವಾರಕ್ಕೆ ಅಣೆಕಟ್ಟೆ ತುಂಬಬೇಕಾಗಿತ್ತು. ಈಗ ತಡವಾದರೂ ಸಹ ಅಣೆಕಟ್ಟೆ ತುಂಬಿರುವುದು ತುಂಗಾ ಅಣೆಕಟ್ಟೆಯನ್ನೇ ನಂಬಿರುವ ಶಿವಮೊಗ್ಗ, ಹಾವೇರಿ ಹಾಗೂ ದಾವಣಗೆರೆ ಜಿಲ್ಲೆಯ ಜನಕ್ಕೆ ಸಂತಸವಾಗಿದೆ. ತುಂಗಾ ಅಣೆಕಟ್ಟು 588.21 ಮೀಟರ್ ಎತ್ತರವಿದೆ. ಅಣೆಕಟ್ಟೆಯಲ್ಲಿ 3.24 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವನ್ನು ಹೊಂದಿದೆ. ಅಣೆಕಟ್ಟೆಗೆ 22 ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಲಾಗಿದೆ.

# ಎಸ್ ಐ ಆರ್ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳ ಯಾವುದೇ ಪಾತ್ರವಿಲ್ಲ

• **ಉದಯವಾಹಿನಿ ಚಿಕ್ಕಮಗಳೂರು:**

ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕುರಿತು ಬಿಜೆಪಿ ಮಾಡುತ್ತಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ, ಈ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳ ಯಾವುದೇ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದರು. ಕಡೂರಿನಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೇಂದ್ರ ಚುನಾವಣಾ ಆಯೋಗವೇ ನಡೆಸುತ್ತಿದ್ದು, ಅಗತ್ಯವಿದ್ದರೆ ಆಯೋಗವೇ ಸೂಕ್ತ ನಿರ್ದೇಶನಗಳನ್ನು ನೀಡಲಿದೆ ಎಂದರು. ಎಸ್‌ಐಆರ್ ಸರಿಯಾಗಿ ನಡೆಯುತ್ತಿಲ್ಲ ಎಂಬ ದೂರುಗಳಿದ್ದರೆ ಕೇಂದ್ರ ಚುನಾವಣಾ ಆಯೋಗ ಪರಿಶೀಲಿಸಲಿ. ಸರಿ ಇಲ್ಲವೆಂದರೆ ತಿದ್ದುಪಡಿ ಮಾಡಿಕೊಂಡು ಮುಂದುವರಿಯಬಹುದು. ಇದರಲ್ಲಿ ನಮ್ಮ ರಾಜಕೀಯದವರ ಪಾತ್ರವೇ ಇಲ್ಲ. ಸರ್ಕಾರದ ವತಿಯಿಂದ ಅವರು ಕೇಳಿದಷ್ಟು ಸಿಬ್ಬಂದಿಯನ್ನು ಒದಗಿಸುತ್ತೇವೆ. ಪ್ರಕ್ರಿಯೆ ನಡೆಸುವುದು ಚುನಾವಣಾ ಆಯೋಗದ ಜವಾಬ್ದಾರಿ ಎಂದು ಹೇಳಿದರು. ಬಿಜೆಪಿ ನಾಯಕರು ಅನಗತ್ಯ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಸಚಿವರು,


ಉದಯವಾಹಿನಿ ಚಿತ್ರ

ಜಯನಗರದಲ್ಲಿ ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷದ ಚಿಹ್ನೆಯೊಂದಿಗೆ ಎಸ್‌ಐಆರ್ ಸಂಬಂಧಿಸಿದ ಕರಪತ್ರಗಳನ್ನು ಹಂಚುತ್ತಿದ್ದಾರೆ. ಈ ರೀತಿಯ ನಡೆ ಸರಿಯಲ್ಲ. ಇದನ್ನು ನಾವೂ ಮಾಡಬಾರದು, ಅವರು ಕೂಡ ಮಾಡಬಾರದು. ಮತದಾರರ ಪಟ್ಟಿಯ ಪರಿಷ್ಕರಣೆ ವೇಳೆ ರಾಜಕೀಯ ಬೆರೆಸಬಾರದು. ಚುನಾವಣೆ ಬಂದಾಗ ಮತ ಕೇಳುವುದು ಬೇರೆ ವಿಷಯ. ಈಗ ನಡೆಯುತ್ತಿರುವುದು ಮತದಾರರ ಪಟ್ಟಿಯನ್ನು ಸರಿಪಡಿಸುವ ಕೆಲಸ ಮಾತ್ರ ಎಂದು ಹೇಳಿದರು.

ಈ ವೇಳೆ ಮೇಕೆದಾಟು ಯೋಜನೆ ಕುರಿತೂ ಮಾತನಾಡಿದ ರಾಮಲಿಂಗಾರೆಡ್ಡಿ, ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಕ್ಕಾಗಿ 4.57 ಟಿಎಂಸಿ ನೀರು ಮೀಸಲಿರಿಸಲಾಗಿದೆ ಎಂದು ತಿಳಿಸಿದರು. ನಾವು ವಿದ್ಯುತ್ ಉತ್ಪಾದನೆಗೆ ಮಾತ್ರ ಅನುಮತಿ ಕೇಳುತ್ತಿದ್ದೇವೆ. ಕಳೆದ ತಿಂಗಳು ನೀರು ಬಿಡುಗಡೆ ಮಾಡುವ ಪರಿಸ್ಥಿತಿ ಇರಲಿಲ್ಲ, ನಮ್ಮ ಅಣೆಕಟ್ಟೆಯಲ್ಲಿ ನೀರೇ ಇರಲಿಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವೂ ನೀರಿನ ಕೊರತೆಯಿಂದ ನೀರು ಬಿಡುವಂತೆ ಸೂಚನೆ ನೀಡಿಲ್ಲ ಎಂದರು. ಮೇಕೆದಾಟು ಅಣೆಕಟ್ಟು ನಿರ್ಮಾಣವಾಗಿದ್ದರೆ ಅಗತ್ಯವಿದ್ದಾಗ ತಮಿಳುನಾಡಿಗೂ ನೀರು ಬಿಡಬಹುದಿತ್ತು.

ಈ ಯೋಜನೆಯಿಂದ ನಮಗೆ ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಗೆ ಮಾತ್ರ ಅನುಕೂಲವಾಗುತ್ತದೆ. ಒಂದು ಬಕೆಟ್ ನೀರನ್ನೂ ಬೇರೆ ಉದ್ದೇಶಕ್ಕೆ ಬಳಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

# ಕುತ್ತಿಗೆ ಮಟ್ಟದ ನೀರಿನಲ್ಲಿ ಶವ ಹೊರಬೇಕಾದ ದುಸ್ಥಿತಿ

## ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹೊಸಾಕುಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ದೊಡ್ಡಹಿತ್ತಲಕೇರಿ ಮಜರೆ ಗ್ರಾಮಸ್ಥರಿಗೆ

• **ಉದಯವಾಹಿನಿ ಕಾರವಾರ :**

ತಂತ್ರಜ್ಞಾನ ಜಗತ್ತಿನಲ್ಲಿ ಮುನ್ನುಗ್ಗುತ್ತಿದ್ದರೂ, ದೇಶಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳೇ ಕಳೆದಿದ್ದರೂ, ಹಳ್ಳಿಗಳ ಮೂಲ ಸೌಕರ್ಯಗಳ ಸಮಸ್ಯೆಗಳಿಗೆ ಮಾತ್ರ ಇಂದಿಗೂ ಮುಕ್ತಿ ಸಿಕ್ಕಿಲ್ಲ. ಇದಕ್ಕೆ ಜ್ವಲಂತ ಉದಾಹರಣೆ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹೊಸಾಕುಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ದೊಡ್ಡಹಿತ್ತಲಕೇರಿ ಮಜರೆ. ಇಲ್ಲಿನ ನಿವಾಸಿಗಳಿಗೆ ಇಂದಿಗೂ ಒಂದು ಸಾರ್ವಜನಿಕ ರಸ್ತೆ ಇಲ್ಲ, ಹೊಳೆ ದಾಟಲು ಸೇತುವೆಯೂ ಇಲ್ಲ. ಮಳೆಗಾಲ ಬಂದರೆ ಸಾಕು, ಇಲ್ಲಿನ ಜನರ ಬದುಕು ನರಕ ಸದೃಶವಾಗುತ್ತದೆ.

**ಕುತ್ತಿಗೆ ಮಟ್ಟದ ನೀರಿನಲ್ಲೇ ಮೃತದೇಹ ಸಾಗಿಸಬೇಕು :** ಗ್ರಾಮದ ಕ್ರಿಸ್ಟನ್ ಜೋಸೆಫ್ ರೋಡ್ರಿಗ್ರಸ್ ಎಂಬುವರು ಮೃತಪಟ್ಟಾಗ ಅವರ ಅಂತ್ಯಕ್ರಿಯೆಗಾಗಿ ಶವದ ಪೆಟ್ಟಿಗೆಯನ್ನು ಗ್ರಾಮಸ್ಥರು ಕುತ್ತಿಗೆ ಮಟ್ಟದ ನೀರಿನಲ್ಲಿ ಹೊತ್ತು ಸಾಗಿಸಬೇಕಾದ ಅತ್ಯಂತ ದುರ್ದೈವದ ಘಟನೆ ನಡೆದಿದೆ. ಮೂಲ ಸೌಕರ್ಯಗಳ ಕೊರತೆಯಿಂದಾಗಿ ಮೃತದೇಹವನ್ನೂ ಗೌರವಯುತವಾಗಿ, ಸುರಕ್ಷಿತವಾಗಿ ಸಾಗಿಸಲು ಸಾಧ್ಯವಾಗದ ಈ ದೃಶ್ಯ ಇಡೀ ಆಡಳಿತ ವ್ಯವಸ್ಥೆ ಮತ್ತು ಜನಪ್ರತಿನಿಧಿಗಳ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಖಾಸಗಿ ಜಮೀನೇ ದಾರಿ ;** ಮಳೆ ಬಂದರೆ ಸಂಪೂರ್ಣ ಜಲಾವೃತ ದೊಡ್ಡಹಿತ್ತಲಕೇರಿಯಲ್ಲಿ ಸುಮಾರು 50ಕ್ಕೂ ಹೆಚ್ಚು ಮನೆಗಳಿದ್ದು, 150ಕ್ಕೂ ಅಧಿಕ ಜನಸಂಖ್ಯೆಯಿದೆ.

ಗ್ರಾಮಕ್ಕೆ ತೆರಳಲು ಯಾವುದೇ ಸಮರ್ಪಕ ಸಾರ್ವಜನಿಕ ರಸ್ತೆ ಇಲ್ಲದ ಕಾರಣ, ನಿವಾಸಿಗಳು ದಶಕಗಳಿಂದ ಖಾಸಗಿ ಜಮೀನು ಹಾಗೂ ತೋಟಗಳ ಮೂಲಕವೇ ಸಂಚರಿಸುತ್ತಿದ್ದಾರೆ.



ಉದಯವಾಹಿನಿ ಚಿತ್ರ

**ಉಕ್ಕಿ ಹರಿಯುವ ಭಾಸ್ಕೇರಿ ಹೊಳೆ:** ಸಿದ್ದಾಪುರ ಭಾಗದಲ್ಲಿ ಭಾರಿ ಮಳೆಯಾದಾಗ ಗ್ರಾಮದ ಮಧ್ಯೆ ಹರಿಯುವ ಭಾಸ್ಕೇರಿ ಹೊಳೆ ಉಕ್ಕಿ ಹರಿಯುತ್ತದೆ.

**ಜಗುಲಿಯವರೆಗೂ ನೀರು :** ಪ್ರವಾಹದ ನೀರು ತೋಟಗಳು, ದಾರಿಗಳನ್ನು ದಾಟಿ ಜನರ ಮನೆಗಳ ಜಗುಲಿಯವರೆಗೂ ನುಗ್ಗುತ್ತದೆ. ಇದರಿಂದಾಗಿ ಹಲವು ಕುಟುಂಬಗಳು ಕಾಳಜಿ ಕೇಂದ್ರಗಳ ಆಶ್ರಯ ಪಡೆಯಬೇಕಾಗುತ್ತದೆ.

**ಜೀವದ ಹಂಗು ತೊರೆದು ಸಂಚಾರ :** ಗ್ರಾಮಸ್ಥರು, ಮಹಿಳೆಯರು ಮತ್ತು ಶಾಲಾ ಮಕ್ಕಳು ದಿನನಿತ್ಯದ ಅಗತ್ಯಗಳಿಗಾಗಿ ಸೊಂಟದವರೆಗೆ, ಕೆಲವೊಮ್ಮೆ ಕುತ್ತಿಗೆ ಮಟ್ಟದ ನೀರಿನಲ್ಲೇ ಜೀವ ಕೈಯಲ್ಲಿ ಹಿಡಿದು ದಾಟಬೇಕಾದ ಅನಿವಾರ್ಯತೆ ಇದೆ.

> 'ನಾವು ನೂರಾರು ವರ್ಷಗಳಿಂದ ಇಲ್ಲೇ ವಾಸಿಸುತ್ತಿದ್ದೇವೆ. ಆದರೆ ಪ್ರತಿ ಮಳೆಗಾಲದಲ್ಲೂ ಜೀವಭಯದಲ್ಲೇ ದಿನ ಕಳೆಯಬೇಕು. ಮಕ್ಕಳ ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆ ಎಲ್ಲದಕ್ಕೂ ತೊಂದರೆಯಾಗುತ್ತಿದೆ. ಸರ್ಕಾರ ಕೂಡಲೇ ನಮಗೆ ಶಾಶ್ವತ ಸೇತುವೆ ಮತ್ತು ರಸ್ತೆ ನಿರ್ಮಿಸಿಕೊಡಬೇಕು' ಎಂದು ಸ್ಥಳೀಯರಾದ ಆಗ್ರಹಿಸಿದ್ದಾರೆ.
>
> **ಬಲರಾಮ ನಾಯ್ಕ**

**ದಶಕಗಳ ಬೇಡಿಕೆಗೆ ತಕರಾರಿನ ನೆಪ ಕೇಳುವವರಿಲ್ಲ ಅಳಲು :** ಭಾಸ್ಕೇರಿ ಹೊಳೆಗೆ ಶಾಶ್ವತ ಕಾಲುಸಂಕ ಹಾಗೂ ಗ್ರಾಮಕ್ಕೆ ಸಾರ್ವಜನಿಕ ಕಾಲುದಾರಿ ನಿರ್ಮಿಸುವಂತೆ ಸ್ಥಳೀಯರು ದಶಕಗಳಿಂದ ಸರ್ಕಾರ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸುತ್ತಲೇ ಬಂದಿದ್ದಾರೆ. ಆದರೆ, ಪ್ರತಿ ಬಾರಿಯೂ ವಿವಿಧ ತಾಂತ್ರಿಕ ಕಾರಣಗಳು ಅಥವಾ ತಕರಾರುಗಳ ನೆಪವೊಡ್ಡಿ ಕಾಮಗಾರಿಯನ್ನು ನೆನೆಗುದಿಗೆ ಹಾಕಲಾಗಿದೆ ಎಂಬುದು ಸ್ಥಳೀಯರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಮೂಲಭೂತ ಹಕ್ಕಾಗಿರುವ ಸುರಕ್ಷಿತ ಸಂಚಾರ ವ್ಯವಸ್ಥೆಗಾಗಿ ದೊಡ್ಡಹಿತ್ತಲಕೇರಿ ಜನರು ನಡೆಸುತ್ತಿರುವ ಈ ಹೋರಾಟಕ್ಕೆ ಇನ್ನು ಮುಂದಾದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಣ್ಣು ತೆರೆಯುತ್ತಾರಾ? ಇನ್ನಾದರೂ ಇವರ ನೋವಿಗೆ ಶಾಶ್ವತ ಪರಿಹಾರ ಸಿಗಲಿದೆಯೇ? ಎಂದು ಸಾರ್ವಜನಿಕ ವಲಯ ಪ್ರಶ್ನಿಸುತ್ತಿದೆ.

> ಗ್ರಾಮಕ್ಕೆ ಸೇತುವೆ ನಿರ್ಮಾಣ ಮಾಡಲು ಖುದ್ದಾಗಿ ಭೇಟಿ ನೀಡಿದ್ದು, ಅಧಿಕಾರಿಗಳು ಸೇತುವೆ ನಿರ್ಮಾಣಕ್ಕೆ ಸರ್ವೆ ಕೂಡ ನಡೆಸಿದ್ದರು. ಆದರೆ, ಅಲ್ಲಿನ ಕೆಲ ಸ್ಥಳೀಯರು ಸೇತುವೆ ನಿರ್ಮಾಣಕ್ಕೆ ಬಿಟ್ಟಿಲ್ಲ. ನಾನು ಕೇಳಿದ ಕಡೆ ಎಲ್ಲವೂ ಸೇತುವೆ ನಿರ್ಮಾಣ ಮಾಡಿದ್ದೇನೆ. ಅಲ್ಲಿ ಖಾಸಗಿ ಜಾಗ ಇರುವ ಕಾರಣ ಎರಡು ಬದಿ ಜಾಗ ಬಿಡುತ್ತಿಲ್ಲ. ಸರ್ಕಾರದ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನಿಸುತ್ತೇನೆ. ರಾಜಕೀಯದಲ್ಲಿ ಆಗದ ರೀತಿ ತಡೆಯುವ ಕೆಲಸವೂ ನಡೆಯುತ್ತಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.
>
> **ಶಾಸಕ ದಿನಕರ ಶೆಟ್ಟಿ**

## ಮಿನಿ ನ್ಯೂಸ್

### ಕೇಸ್ ಹೆಸರಲ್ಲಿ ಕಿರಿಕಿರಿ-ದಿಡೀರ್ ಪ್ರತಿಭಟನೆ

• **ಉದಯವಾಹಿನಿ ಹೊಸಪೇಟೆ.**

ದ್ವಿಚಕ್ರ ವಾಹನ ಸವಾರರಿಗೆ ಕೇಸ್ ಹಾಕುವ ನೆಪದಲ್ಲಿ ಪೊಲೀಸರು ಅನಗತ್ಯ ಕಿರಿಕಿರಿ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿ, ದ್ವಿಚಕ್ರ ವಾಹನ ಸವಾರನ ಸಂಬಂಧಿಕರು ದಿಡೀರ್ ಪ್ರತಿಭಟನೆ ನಡೆಸಿದ ಘಟನೆ ನಗರದಲ್ಲಿ ಜರುಗಿದೆ.

ನಗರದ ಪುಣ್ಯಮೂರ್ತಿ ವೃತ್ತದಲ್ಲಿ ಮಧ್ಯಾಹ್ನ ಜರುಗಿದ ಘಟನೆಯಲ್ಲಿ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಬೈಕ್ ತಡೆದು ಫೈನ್ ಹಾಕಿದ್ದಾರೆ ಎಂದು ಆರೋಪಿಸಿ, ಬೈಕ್ ಸವಾರನ ಸಂಬಂಧಿಕರು ರಸ್ತೆ ಮಧ್ಯೆ ಕುಳಿತು ದಿಡೀರ್ ಪ್ರತಿಭಟನೆ ನಡೆಸಿದರು.

ದಿಡೀರ್ ಪ್ರತಿಭಟನೆ ಹಿನ್ನಲೆಯಲ್ಲಿ ಕೆಲ ಕಾಲ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಈ ಸಂದರ್ಭದಲ್ಲಿ ಪೊಲೀಸರು ಮತ್ತು ದ್ವಿಚಕ್ರ ವಾಹನ ಸವಾರನ ಸಂಬಂಧಿಕರ ನಡುವೆ ಮಾತಿನ ಚಕಮಕಿ ಜರುಗಿತು. ಸ್ಥಳಕ್ಕೆ ಆಗಮಿಸಿದ ಪಟ್ಟಣ ಠಾಣೆ ಪಿಐ ಫೈಜುಲ್ಲಾ ಹಾಗೂ ಪಟ್ಟಣ ಠಾಣೆ ಮತ್ತು ಸಂಚಾರಿ ಠಾಣೆ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿ, ಆಸ್ಪತ್ರೆಗೆ ಕಳುಹಿಸಿಕೊಟ್ಟರು.

### ಮನೆ ಮನೆಗೆ ಬಿಎಲ್‌ಒಗಳ ಭೇಟಿ 8.28 ಲಕ್ಷಕ್ಕೂ ಅಧಿಕ ಗಣತಿ ನಮೂನೆಗಳ ವಿತರಣೆ

• **ಉದಯವಾಹಿನಿ ಹೊಸಪೇಟೆ.**

ವಿಜಯನಗರ ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಚುರುಕಿನಿಂದ ಸಾಗುತ್ತಿದ್ದು, ಜಿಲ್ಲೆಯಾದ್ಯಂತ ಇದುವರೆಗೆ ಒಟ್ಟು 8,28,650 (ಶೇ 72.51) ಗಣತಿ ನಮೂನೆಗಳನ್ನು ವಿತರಿಸಲಾಗಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸುತ್ತಿದ್ದಾರೆ.


ಉದಯವಾಹಿನಿ ಚಿತ್ರ

ಪ್ರಸ್ತುತ ಜಿಲ್ಲೆಯ ಮತದಾರರ ಪಟ್ಟಿಯಲ್ಲಿ ಒಟ್ಟು 11,42,732 ಮತದಾರರಿದ್ದು. ಈಗಾಗಲೇ ಶೇ. 94 ರಷ್ಟು ಮತದಾರರ ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ. ಜೂನ್ 30 ರಿಂದ ಅಭಿಯಾನ ಪ್ರಾರಂಭವಾಗಿದ್ದು, ಜುಲೈ 29 ರವರೆಗೆ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಹಾಗೂ ಡಿಜಿಟಲೀಕರಣ ಪ್ರಕ್ರಿಯೆ ನಡೆಯಲಿದೆ.

ವಿತರಿಸಲಾದ ಗಣತಿ ನಮೂನೆಗಳ ಪೈಕಿ ಒಟ್ಟು 33,987 (ಶೇ. 2.97) ನಮೂನೆಗಳನ್ನು ಈಗಾಗಲೇ ಡಿಜಿಟಲೀಕರಣಗೊಳಿಸಲಾಗಿದೆ. ಇದಲ್ಲದೆ, 516 ಮತದಾರರು ಸ್ವತಃ ಆನ್ಲೈನ್ ಮೂಲಕ ನಮೂನೆಗಳನ್ನು ಸಲ್ಲಿಸಿದ್ದಾರೆ. ಬಿಎಲ್‌ಒಗಳ ಪರಿಶೀಲನೆ ವೇಳೆ ಜಿಲ್ಲೆಯಲ್ಲಿ 289 ಮೃತ ಮತದಾರರು ಹಾಗೂ ಖಾಯಂ ಆಗಿ ಸ್ಥಳಾಂತರಗೊಂಡಿರುವ 131 ಮತದಾರರರನ್ನು ಗುರುತಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದ್ದಾರೆ.

### ಪಿಎಸ್ ಐ ಸೋಮಲಿಂಗ ಒಡೆಯರ್ ಅವರ ಅಮಾನತು ವಾಪಸ್ಸಿಗೆ ಆಗ್ರಹ

• **ಉದಯವಾಹಿನಿ ಕರಜಗಿ, :**

ಪಿಎಸ್ ಐ ಸೋಮಲಿಂಗ ಒಡೆಯರ್ ಅವರ ಅಮಾನತು ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ( ಜು.6 ಸೋಮವಾರ ) ಅಫಜಲಪುರ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರವೇ ನಗರ ಘಟಕದ ಅಧ್ಯಕ್ಷ ಹಾಗೂ ಕುರುಬ ಸಮಾಜದ ಮುಖಂಡ ಬಾಬು ಪೂಜಾರಿ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಅವರು, ತಾಲ್ಲೂಕಿನ ಪ್ರದೇಶ ಕುರುಬರ ಸಂಘ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ನಡೆಯಲಿರುವ ಪ್ರತಿಭಟನೆಯು ಪಟ್ಟಣದ ಬಸವೇಶ್ವರ ವೃತ್ತದಿಂದ ಆರಂಭವಾಗಿ ತಹಶೀಲ್ದಾರ್ ಕಚೇರಿವರೆಗೆ ಸಾಗಲಿದೆ ಎಂದು ಹೇಳಿದರು. ಪಿಎಸ್ ಐ ಸೋಮಲಿಂಗ ಒಡೆಯರ್ ಅವರ ಅಮಾನತು ಆದೇಶವನ್ನು ರದ್ದುಗೊಳಿಸಿ ಅವರನ್ನು ಮರುನೇಮಕ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಲಾಗುವುದು. ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬಾಬು ಪೂಜಾರಿ ಮನವಿ ಮಾಡಿದ್ದಾರೆ.

### ಚಿಕ್ಕಮ್ಯಾಗೇರಿಯಲ್ಲಿ ಕಾಂಗ್ರೇಸ್ ನಿಂದ ಎಸ್‌ಐಆರ್ ಕುರಿತು ಕಾರ್ಯಾಗಾರ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಯಲಬುರ್ಗಾ**

ವಿಧಾನಸಭಾ ಕ್ಷೇತ್ರದ ಚಿಕ್ಕಮ್ಯಾಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮದಲ್ಲಿ ಬ್ಲಾಕ್ ಕಾಂಗ್ರೇಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಚಿಕ್ಕಮ್ಯಾಗೇರಿ, ಕುಡಗುಂಟಿ, ಕುದರಿಕೋಟಿಗಿ, ಮಲಕಸಮುದ್ರ ಗ್ರಾಮಗಳ ಬಿಎಲ್‌ಎ2ಗಳಿಗೆ ಹಾಗೂ ಮುಖಂಡರಿಗೆ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತು ಕಾರ್ಯಾಗಾರ ನಡೆಸಿ ಮಾಹಿತಿ ನೀಡಲಾಯಿತು.

ಈ ವೇಳೆ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾದ ಶ್ರೀ ಕೇರಿಬಸಪ್ಪ ನಿಡಗುಂದಿ, ಕಾರ್ಯಾಧ್ಯಕ್ಷರಾದ ಶ್ರೀ ಡಾ.ಶಿವನಗೌಡ ದಾನರಡ್ಡಿ, ಪ್ರಧಾನ ಕಾರ್ಯದರ್ಶಿ ಶರಣಪ್ಪ ಗಾಂಜಿ, ಗ್ಯಾರಂಟಿ ಯೋಜನೆ ಸಮಿತಿಯ ಅಧ್ಯಕ್ಷರಾದ ಶ್ರೀ ಸುಧೀರ್ ಕೊರ್ಲಳ್ಳಿ, ಗ್ರಾ.ಪಂ ಮಾಜಿ ಅಧ್ಯಕ್ಷರಾದ ಶ್ರೀ ರೇವಣೆಪ್ಪ ಸಂಗಟಿ, ಕೆಎಂಎಫ್ ನಿರ್ದೇಶಕರಾದ ಶ್ರೀ ಹಂಪಯ್ಯಸ್ವಾಮಿ ಹಿರೇಮಠ, ಯುವ ಕಾಂಗ್ರೇಸ್ ಕಾರ್ಯಾಧ್ಯಕ್ಷರಾದ ಶ್ರೀ ಸಿಎಂ ಈಶ್ವರ ಅಟಮಾಳಗಿ, ಮುಖಂಡರಾದ ಉದಯ ರಾಯರೆಡ್ಡಿ, ಗವಿಸಿದ್ದಪ್ಪ ಚೆಂಡೂರು, ಈರಪ್ಪ ದಸ್ತಾನಿ, ಫಕೀರಪ್ಪ ಇಟಗಿ, ಕರಿಯಪ್ಪ ಗುರಿಕಾರ, ಮುದಕಪ್ಪ ಆಡಿನ್ ಹಾಗೂ ಮುಖಂಡರು ಇದ್ದರು.

### ಭಾರಿ ಮಳೆ ಮಲಪ್ರಭಾ ನದಿಗೆ ಜೀವಕಳೆ ತಂದಿದೆ.

• **ಉದಯವಾಹಿನಿ ಬೆಳಗಾವಿ:**

ಪಶ್ಚಿಮ ಘಟ್ಟ ಮತ್ತು ಖಾನಾಪುರದ ಕಣಕುಂಬಿ ಅರಣ್ಯಪ್ರದೇಶದಲ್ಲಿ ಕಳೆದ ನಾಲ್ಕು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಮಲಪ್ರಭಾ ನದಿಗೆ ಜೀವಕಳೆ ಬಂದಿದೆ. ನದಿ ತುಂಬಿ ಹರಿಯುತ್ತಿರುವ ಪರಿಣಾಮ, ನದಿ ತಟದಲ್ಲಿರುವ ಇಲ್ಲಿನ ಹಬ್ಬಾನಟ್ಟಿ ಗ್ರಾಮದ ಹೊರವಲಯದಲ್ಲಿರುವ ಪುರಾತನ ಮಾರುತಿ ಮಂದಿರ ಭಾಗಶಃ ಜಲಾವೃತಗೊಂಡಿದೆ ಮಾರುತಿ ಮಂದಿರದ ಗರ್ಭಗುಡಿ ಸೇರಿದಂತೆ ರಾಮ, ಲಕ್ಷ್ಮಣ, ಸೀತಾ ಮೂರ್ತಿಗಳ ಕತ್ತಿನವರೆಗೆ ನೀರು ಬಂದಿದೆ. ಶಿವನ ಮಂದಿರ ಕೂಡ ಈಗಾಗಲೇ ನೀರಿನಲ್ಲಿ ಮುಳುಗಿದೆ.

